## ಮತೀಯ, ನಿರ್ದೇಶಿತ
## ಹಿಂಸಾಚಾರ ತಡೆ ಮಸೂದೆ - 2011

# ಹುನ್ನಾರದ ಹಿಂದಿನ ಹೆಜ್ಜೆಗಳು

ಜಾಗರಣ ಪ್ರಕಾಶನ
ಬೆಂಗಳೂರು

## ಕೃತಜ್ಞತೆ

ವಿವಾದಿತ ಮತೀಯ ಮತ್ತು ನಿರ್ದೇಶಿತ ಹಿಂಸಾಚಾರ ತಡೆ ಮಸೂದೆ 2011ರ ಕುರಿತಾಗಿ ವ್ಯಾಪಕ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ನಾಡಿನ ಗಣ್ಯರ, ಕಾನೂನು ತಜ್ಞರ ಇಂಗಿತವನ್ನು ಪ್ರಸ್ತುತಪಡಿಸುವ ಈ ಹೊತ್ತಿಗೆ ಚರ್ಚೆಗೆ ದಿಕ್ಕು-ದಿಸೆಯನ್ನು ನೀಡಲೆಂಬ ಆಶಯ ನಮ್ಮದು. ಪ್ರಕಟಣೆಗೆ ಅನುಮತಿ ನೀಡಿದ ಎಲ್ಲ ಲೇಖಕರಿಗೆ, ಹೊಸ ದಿಗಂತ, ಅಸೀಮಾ, ಕನ್ನಡಪ್ರಭ ಪತ್ರಿಕೆಗಳಿಗೆ, ಅನುವಾದದಲ್ಲಿ ಕೈಜೋಡಿಸಿದ ಮಂಜುನಾಥ ಭಟ್, ಸಂತೋಷ ತಮ್ಮಯ್ಯ ಇವರಿಗೆ ಕೃತಜ್ಞತೆಗಳು.

**ಪ್ರಕಾಶಕರು**

**ಜಾಗರಣ ಪ್ರಕಾಶನ**
74, ರಂಗರಾವ್ ರಸ್ತೆ
ಶಂಕರಪುರಂ, ಬೆಂಗಳೂರು – 560 004
ದೂರವಾಣಿ : 080–26610081

ಬೆಲೆ : ರೂ. 8/–

ಮುದ್ರಕರು :
**ರಾಷ್ಟ್ರೋತ್ಥಾನ ಮುದ್ರಣಾಲಯ**
ಬೆಂಗಳೂರು – 560 019

# ಏಕಪಕ್ಷೀಯ ಶಾಸನದ ಹಿಂದೆ ಕಾಂಗ್ರೆಸ್ ಷಡ್ಯಂತ್ರ

ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರಕಾರ ಹಿಂದೂ ವಿರೋಧಿ ನೀತಿಗಳನ್ನು ಅನುಸರಿಸುತ್ತಿರುವುದು ಹೊಸ ವಿಷಯವೇನಲ್ಲ. ದಿನಪತ್ರಿಕೆಗಳನ್ನು ಓದುವ, ಟಿವಿ ನೋಡುವ ಎಲ್ಲರಿಗೂ ಗೊತ್ತಿರುವ ವಿಷಯ ಇದು. ಕಾಂಗ್ರೆಸ್ಸಿನ ಹಿಂದೂ ವಿರೋಧಿ ಕ್ರಮಕ್ಕೆ ಈಗ ಮತ್ತೊಂದು ಸೇರ್ಪಡೆಯಾಗಿದೆ. ಅದೇ ಮತೀಯ ಹಿಂಸಾಚಾರ ತಡೆ ಶಾಸನ. ಇದು ಹಿಂದುಗಳ ಪಾಲಿಗೆ ಅತ್ಯಂತ ಭಯಾನಕ ಶಾಸನವೇ ಸರಿ. ಒಂದು ವೇಳೆ ಇದು ಜಾರಿಯಾದಲ್ಲಿ ನಮ್ಮ ದೇಶದಲ್ಲಿ ಮತೀಯ ಸಾಮರಸ್ಯಕ್ಕೆ ದೊಡ್ಡ ಕೊಡಲಿಯೇಟು ಬಿದ್ದಂತೆ. ಸರಕಾರವೇ ಹಿಂದುಗಳ ಜೀವಹಾನಿ, ಮಾನಹಾನಿ ಮಾಡಲು ಅಲ್ಪಸಂಖ್ಯಾತರಿಗೆ ಪರವಾನಗಿ ಕೊಟ್ಟಂತೆ ಆದೀತು. ಈ ಕರಾಳ ಶಾಸನದ ಬಗ್ಗೆ ಎಲ್ಲ ಹಿಂದುಗಳು ಎಚ್ಚರಗೊಂಡು ಈಗಲೇ ಪ್ರತಿಭಟಿಸದಿದ್ದಲ್ಲಿ ಮುಂದೆ ಪಶ್ಚಾತ್ತಾಪ ಪಡಬೇಕಾದೀತು.

ಬರಲಿರುವ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಕೇಂದ್ರ ಸರಕಾರವು 'ಮತೀಯ ಮತ್ತು ನಿರ್ದೇಶಿತ ಹಿಂಸಾಚಾರ ತಡೆ (ನ್ಯಾಯ ಮತ್ತು ಪರಿಹಾರ ಪ್ರಾಪ್ತಿಗಾಗಿ) ಮಸೂದೆ – 2011 [Prevention of Communal and Targeted Violence (Access to justice and reparation) Bill - 2011] ಇದನ್ನು ಚರ್ಚೆಗಾಗಿ ಮಂಡಿಸಲಿದೆ. ಈ ವಿವಾದಿತ ಮಸೂದೆಗೆ ಸಂಬಂಧಿಸಿದಂತೆ ಈಗಾಗಲೇ ಮಾಧ್ಯಮದಲ್ಲಿ ಮತ್ತು ಕಾನೂನುತಜ್ಞರ ಮಟ್ಟದಲ್ಲಿ ವ್ಯಾಪಕವಾದ ಚರ್ಚೆ ಆರಂಭವಾಗಿದೆ.

**ಏನಿದೆ ಈ ವಿಧೇಯಕದಲ್ಲಿ?**

ಈ ವಿಧೇಯಕದಲ್ಲಿ ಒಂಭತ್ತು ಅಧ್ಯಾಯಗಳು ಮತ್ತು 138 ವಿಧಿಗಳಿವೆ. ಈ ವಿಧಿಗಳಲ್ಲಿ ವಿವಾದಾಸ್ಪದವಾಗಿರುವಂತಹ ಹಲವು ವಿಷಯಗಳಿವೆ. ಆಯ್ದ ಕೆಲವನ್ನು ಇಲ್ಲಿ ನೀಡಲಾಗಿದೆ.

- ಮೊದಲ ಅಧ್ಯಾಯದಲ್ಲಿ ಮಸೂದೆಯ ಇಂಗಿತವನ್ನು ವಿವರಿಸುವಾಗ ದೇಶದ ನಾಗರಿಕರನ್ನು 'ಗುಂಪು' ಮತ್ತು 'ಅನ್ಯರು' ಎಂದು ಎರಡು ಹೆಸರಿನಲ್ಲಿ ವ್ಯಾಖ್ಯಾನಿಸಲಾಗಿದೆ. 'ಗುಂಪು' ಎನ್ನಲಾಗುವುದರಲ್ಲಿ ಭಾಷಾ ಅಲ್ಪಸಂಖ್ಯಾತರು ಮತ್ತು ಮತೀಯ ಅಲ್ಪಸಂಖ್ಯಾತರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನವರು ಒಳಗೊಳ್ಳುತ್ತಾರೆ. ಮಿಕ್ಕವರೆಲ್ಲರೂ (ಅರ್ಥಾತ್

ಬಹುಸಂಖ್ಯಾತ ಹಿಂದುಗಳು) 'ಅನ್ಯರು' ಎನ್ನುವ ಗುಂಪಿನಡಿ ಬರುತ್ತಾರೆ. ಕೇವಲ 'ಅಲ್ಪಸಂಖ್ಯಾತರು' ಎಂದು ಕರೆದರೆ ತುಷ್ಟೀಕರಣದ ಪ್ರಯತ್ನವೆಂದು ಆರೋಪಿಸಲು ವಿರೋಧಪಕ್ಷದವರಿಗೆ ಅಸ್ತ್ರ ಒದಗಿಸಿದಂತಾಗುತ್ತದೆ ತಾನೇ. ಅದರಿಂದ ಬಚಾವಾಗಲು ಮತ್ತು ಅದನ್ನು ಒಂದು ಗುರಾಣಿಯಾಗಿ ಬಳಸಿ ಹಿಂದುಗಳಿಂದ ಅವರೆಲ್ಲರನ್ನೂ ಪ್ರತ್ಯೇಕಿಸಿ ಸಮಾಜದಲ್ಲಿ ಒಡಕು ಬೆಳೆಸುವುದು ಹಾಗೂ ತನ್ನ 'ವೋಟ್ ಬ್ಯಾಂಕ್' ರಾಜಕಾರಣಕ್ಕೆ ಅವರನ್ನು ಬಳಸುವುದು ಇದರ ಹಿಂದಿರುವ ಹುನ್ನಾರ.

- ಮತೀಯ ದಂಗೆ, ಲೈಂಗಿಕ ಅಪರಾಧ, ದ್ವೇಷಪೂರಿತ ಪ್ರಚಾರ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಮಸೂದೆಯಲ್ಲಿ ನೀಡಲಾಗಿರುವ ವಿವರಣೆ ಹೀಗಿದೆ: ಅಲ್ಪಸಂಖ್ಯಾತರ ಪ್ರಾಣಹಾನಿ, ಆಸ್ತಿ–ಸಂಪತ್ತು ನಷ್ಟವಾದಲ್ಲಿ ಮಾತ್ರ ಅದನ್ನು 'ಮತೀಯ ದಂಗೆ' ಮತ್ತು 'ದುರುದ್ದೇಶಪೂರಿತ ಹಿಂಸೆ' ಎಂದು ತಿಳಿಯಲಾಗುವುದು. ಅಲ್ಪಸಂಖ್ಯಾತರು ಹಿಂದುಗಳ ಪ್ರಾಣಹಾನಿ, ಸಂಪತ್ತು ನಷ್ಟ ಎಸಗಿದಲ್ಲಿ ಅದು ಮತೀಯ ದಂಗೆ ಮತ್ತು ದುರುದ್ದೇಶಪೂರಿತ ಹಿಂಸೆ ಎನಿಸಿಕೊಳ್ಳುವುದಿಲ್ಲ. (ಅಂದರೆ, ಗೋಧ್ರಾದಲ್ಲಿ ರೈಲಿಗೆ ಬೆಂಕಿ, ಕಾರಸೇವಕರ ಸಜೀವ ದಹನ, ಇತ್ಯಾದಿಗಳು ಅಪರಾಧವಲ್ಲ. ಆದರೆ, ಅದಕ್ಕೆ ಪ್ರತಿಕ್ರಿಯೆಯಾಗಿ ಗುಜರಾತಿನಲ್ಲಿ ನಂತರ ನಡೆದುದು ಮಾತ್ರ 'ಮತೀಯ ದಂಗೆ').
- ಅಲ್ಪಸಂಖ್ಯಾತ ಸಮುದಾಯದ ಯಾವನೇ ವ್ಯಕ್ತಿಯ ವ್ಯಾಪಾರ ಅಥವಾ ಜೀವನಕ್ಕೆ ಹಾನಿಯೆಸಗಿದಲ್ಲಿ ಅಥವಾ ಸಾರ್ವಜನಿಕವಾಗಿ ಅವನನ್ನು ಅಪಮಾನಿಸಿದಲ್ಲಿ, ಅದು 'ದ್ವೇಷ ಸೃಷ್ಟಿಸಿದ ಅಪರಾಧ' ಎನಿಸುತ್ತದೆ. ಆದರೆ, ಗಲಭೆಯಲ್ಲಿ ಯಾವನೇ ಹಿಂದು ಸತ್ತಲ್ಲಿ, ಗಾಯಗೊಂಡಿದ್ದಲ್ಲಿ, ಅವನ ಸಂಪತ್ತು ನಷ್ಟವಾಗಿದ್ದಲ್ಲಿ, ಅವನು ಅಪಮಾನಿತನಾಗಿದ್ದಲ್ಲಿ, ಬಹಿಷ್ಕೃತನಾಗಿದ್ದಲ್ಲಿ ಅವನನ್ನು 'ಪೀಡಿತ ವ್ಯಕ್ತಿ' ಎಂಬಂತೆ ತಿಳಿಯಲಾಗುವುದಿಲ್ಲ. ಒಟ್ಟಿನಲ್ಲಿ ಈ ಮಸೂದೆಯಂತೆ 'ಪೀಡಿತ'ನೆನಿಸಿಕೊಳ್ಳುವವನು ಅಲ್ಪಸಂಖ್ಯಾತ ಮಾತ್ರ! ಅರ್ಥಾತ್, ಅಲ್ಪಸಂಖ್ಯಾತರು ಏನೇ ಮಾಡಿದರೂ ಅವರಿಗೆ ಕಾನೂನಿನಡಿ ಶಿಕ್ಷೆಯಿಲ್ಲ. ಕಾನೂನಿನ ಭೀತಿಯಿಲ್ಲದೆ 'ಹಿಂಸೆ', 'ದಂಗೆ' ನಡೆಸಲು ಅವರಿಗೆ ಮುಕ್ತ ಅವಕಾಶ. ಅವರಿಗೆ ನಷ್ಟವಾಗಿದ್ದಲ್ಲಿ ಪರಿಹಾರವೂ ನಿಶ್ಚಿತ. ಆದರೆ, ಗಲಭೆಗಳಲ್ಲಿ ಹಿಂದುವಿಗೆ ಕಾನೂನಿಂದಾಗಲೀ, ಸರಕಾರದ್ದಾಗಲೀ ರಕ್ಷಣೆಯ ಭರವಸೆಯೂ ಇಲ್ಲ. ಅವನಿಗೆ 'ದೇವರೇ ಗತಿ'.
- ಹಿಂದು ಮಹಿಳೆಯನ್ನು ಅಲ್ಪಸಂಖ್ಯಾತ ವ್ಯಕ್ತಿಯೊಬ್ಬ ಬಲಾತ್ಕರಿಸಿದಲ್ಲಿ ಅದು ಬಲಾತ್ಕಾರದ ವ್ಯಾಪ್ತಿಗೆ ಬರುವುದಿಲ್ಲ (ವಿಧಿ 7). ಆದರೆ, ಹಿಂದುವೊಬ್ಬ ಅಲ್ಪಸಂಖ್ಯಾತ ವರ್ಗದ ಮಹಿಳೆಯೊಬ್ಬಳ ಬಲಾತ್ಕಾರವೆಸಗಿದಲ್ಲಿ ಅವನು 'ಲೈಂಗಿಕ ಅಪರಾಧಿ'ಯಾಗಿ ಶಿಕ್ಷೆಗೊಳಪಡುತ್ತಾನೆ. ಗಮನಿಸಬೇಕಾದ ಸಂಗತಿ: ಉತ್ತರ ಪ್ರದೇಶದಲ್ಲಿ ಇಮ್ರಾನಾಳೊಂದಿಗೆ ಸ್ವತಃ ಆಕೆಯ ಮಾವ ಎಸಗಿರುವ ಅತ್ಯಾಚಾರ ಈ ಮಸೂದೆಯ ಪ್ರಕಾರ ಅತ್ಯಾಚಾರವೇ ಅಲ್ಲ!

- ಈ ಮಸೂದೆಯಂತೆ ಅಲ್ಪಸಂಖ್ಯಾತರ ಜತೆ ಎಸಗಲಾದ ಕೃತ್ಯಗಳ ಮಾಹಿತಿ ಒದಗಿಸುವವನು ಮಾತ್ರ 'ಸಾಕ್ಷಿ' ಎನಿಸಿಕೊಳ್ಳುತ್ತಾನೆ. ಬಹುಸಂಖ್ಯಾತರಿಗಾದ ಹಾನಿಗೆ ಸಂಬಂಧಿಸಿ ಹೇಳಲಾಗುವ ಯಾವುದೇ ಮಾಹಿತಿ 'ಸಾಕ್ಷಿ' ಎನಿಸಿಕೊಳ್ಳುವುದಿಲ್ಲ. (ತೀಸ್ತಾ ಸೆತಲ್‌ವಾಡ್ ಅಂತಹವರಿಗೆ ಇನ್ನು ಮುಂದೆ ಸುಳ್ಳು ಸಾಕ್ಷಿ ಒದಗಿಸಲು ದಾರಿ ಸುಗಮವಾಯಿತಲ್ಲವೇ?)

- ಮಸೂದೆಯ ಎರಡನೇ ಅಧ್ಯಾಯದಲ್ಲಿನ ವಿಧಿ 8ರಂತೆ ಅಲ್ಪಸಂಖ್ಯಾತರ ಭಾವನೆ ನೋಯಿಸುವಂತೆ ಯಾವುದೇ ಸಂಗತಿ – ಅಂದರೆ ಬೈಬಲ್, ಕುರಾನ್, ಮುಸಲ್ಮಾನ ವೈಯಕ್ತಿಕ ಕಾನೂನು, ಮುಸಲ್ಮಾನರ ರೀತಿ ರಿವಾಜು ಗಳು, ಅವರ ಬೇಡಿಕೆಗಳು, ಅವರ ಸಂಘಟನೆಗಳು, ಅದರ ಆಂದೋಲನ ಗಳು, ಇವ್ಯಾವುದರ ಬಗ್ಗೆಯೂ ಟೀಕಿಸುವುದು, ವಿಶ್ಲೇಷಣಾತ್ಮಕ ಲೇಖನ ಬರೆಯುವುದು, ಇತ್ಯಾದಿ ಮಾಡುವಂತಿಲ್ಲ. ಹಿಂದುಗಳ ಮಾತು, ಲೇಖನ, ಜಾಹಿರಾತು, ಸುದ್ದಿ, ಅಥವಾ ಇನ್ನಾವುದೇ ರೀತಿಯಲ್ಲಿ ಅಲ್ಪಸಂಖ್ಯಾತರ ಮನನೋಯಿಸುವಂತಹ ಕೃತ್ಯವೆಸಗಿದಲ್ಲಿ, ಅವನನ್ನು ಹಿಂಸೆಯನ್ನು ಪ್ರಚೋದಿಸಿದ ಎಂದು ತಿಳಿಯಲಾಗುತ್ತದೆ. ಈ ಅಪರಾಧಕ್ಕಾಗಿ ಅವನು ಶಿಕ್ಷೆ ಗೊಳಗಾಗುತ್ತಾನೆ. (ಒಂದು ಪೂರಕ ಮಾಹಿತಿ: ಸ್ವಾತಂತ್ರ್ಯ ಹೋರಾಟಗಾರ ರಾಗಿದ್ದ ಲಾಲ್–ಬಾಲ್–ಪಾಲ್ ಅವರು ಅಲ್ಪಸಂಖ್ಯಾತರನ್ನು ಸ್ವಾತಂತ್ರ್ಯ ಆಂದೋಲನದಿಂದ ಬೇರ್ಪಡಿಸಿ ದೂರಗೊಳಿಸಿದ ಅಪರಾಧಿಗಳು ಎಂದು ಇತಿಹಾಸಕಾರ ಮುಶಿರುಲ್ ಹಸನ್ ಆರೋಪಿಸಿದ್ದಾರೆ. ಹೀಗಾಗಿ ಇನ್ನು ಮುಂದೆ ಯಾರಾದರೂ ಲಾಲ್–ಬಾಲ್–ಪಾಲ್ ಅವರ ಬಗ್ಗೆ ಗ್ರಂಥ ಪ್ರಕಟಿಸಿ ದಲ್ಲಿ, ಅವರ ಕುರಿತಾಗಿ ಪಾಠ ಮಾಡಿದ್ದಲ್ಲಿ, ಅವರನ್ನು ಉದ್ಧರಿಸಿದ್ದಲ್ಲಿ ಯಾವನೇ ಅಲ್ಪಸಂಖ್ಯಾತ ವ್ಯಕ್ತಿ ತನ್ನ ಮನನೋಯಿಸಲಾಗಿದೆ ಎಂದು ದೂರು ಸಲ್ಲಿಸಬಹುದು. ಆಗ ಆ ಪ್ರಕಾಶಕ ಅಥವಾ ಅಧ್ಯಾಪಕ, ಸೆರೆಮನೆ ಸೇರಲು ಸಹ ತಯಾರಿರಬೇಕಾಗುತ್ತದೆ).

- ಹಿಂದು ಸಂಘಟನೆ, ಸಂಸ್ಥೆಗಳಿಗೆ ಕೊಡಲಿಯೇಟು ಹಾಕುವಂತಹ ಮಸಲತ್ತು ಸಹ ಅತಿ ಜಾಣತನದಿಂದ ಈ ಮಸೂದೆಯಲ್ಲಿ ರೂಪಿಸಲಾಗಿದೆ. ತುಸು ಗಮನಿಸಿ: ಯಾವನೇ ಓರ್ವ ಹಿಂದು ಈ ಮೇಲಿನ ಯಾವುದೇ ಅಪರಾಧ ಮಾಡಿರುವಂತೆ ಅಲ್ಪಸಂಖ್ಯಾತ ವ್ಯಕ್ತಿಯೊಬ್ಬನಿಗೆ ಅನಿಸಿ, ಅವನು ದೂರು ಸಲ್ಲಿಸಿ, ಅದು ಸಾಬೀತಾದಲ್ಲಿ ಆಗ ಆ ವ್ಯಕ್ತಿಯೊಂದಿಗೆ ಅವನ ಸಂಘಟನೆಯ ಪ್ರಮುಖರು ಸಹ ಅವರ ಪಾತ್ರವಿರಲಿ, ಇಲ್ಲದಿರಲಿ, ಆ ಸಂಸ್ಥೆ ನೊಂದಾಯಿತ ವಾಗಿರಲಿ, ಇಲ್ಲದಿರಲಿ ಈ ಕಾನೂನಿನ ವ್ಯಾಪ್ತಿಗೊಳಪಡುತ್ತಾರೆ. ಉದಾ ಹರಣೆಗೆ, ಒಂದೂರಿನಲ್ಲಿ ಒಂದು ಗಣೇಶೋತ್ಸವ ಸಮಿತಿಯೋ, ಹೋಲಿ ಉತ್ಸವ ಸಮಿತಿಯೋ ಇದೆ ಎಂದಿಟ್ಟುಕೊಳ್ಳಿ. ಅದರ ಯಾವನೇ ಒಬ್ಬ ಸದಸ್ಯ ತನ್ನನ್ನು ರೇಗಿಸಿದ, ತನ್ನ ಮೇಲೆ ಬಣ್ಣ ಎರಚಿದ, ಜಗಳವಾಡಿದ, ಇತ್ಯಾದಿ ದೂರನ್ನು ಅಲ್ಪಸಂಖ್ಯಾತನೊಬ್ಬ ಸಲ್ಲಿಸಿದಲ್ಲಿ ಆಗ ಆ ಹಿಂದುವಿನೊಂದಿಗೆ,

ಆ ಸಮಿತಿಯ ಇನ್ನಿತರರು ಸಹ ನ್ಯಾಯಾಲಯದ ಕಟಕಟೆಗೆ ಬರಬೇಕಾಗಬಹುದು. ಪ್ರಾಯಶಃ ಅವರೆಲ್ಲರಿಗೂ ಶಿಕ್ಷೆ ಆಗಬಹುದು!

- ನಮ್ಮ ಸಂವಿಧಾನದಂತೆ ಕಾನೂನು ಮತ್ತು ಸುವ್ಯವಸ್ಥೆಗಳು ಆಯಾ ರಾಜ್ಯ ಸರಕಾರಗಳ ಅಧಿಕಾರದ ವ್ಯಾಪ್ತಿಗೆ ಒಳಪಟ್ಟಂತವು. ಕೇಂದ್ರ ಸರಕಾರವು ಅದರಲ್ಲಿ ಮೂಗು ತೂರಿಸುವಂತಿಲ್ಲ. ರಾಜ್ಯ ಸರಕಾರದಿಂದ ಬೇಡಿಕೆ ಬಂದಾಗ ಮಾತ್ರ ಕೇಂದ್ರವು ಅಗತ್ಯದ ಸಲಹೆ ಹಾಗೂ ನೆರವು ನೀಡಬಹುದು. ಆದರೆ, ಪ್ರಸ್ತುತ ಮಸೂದೆಯಲ್ಲಿ ಯಾವುದೇ ದಂಗೆಯಿಂದಾಗಿ ಕಾನೂನು ಮತ್ತು ಸುವ್ಯವಸ್ಥೆಯ ರಕ್ಷಣೆಯ ತನ್ನ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುವಲ್ಲಿ ರಾಜ್ಯಸರಕಾರವು ವಿಫಲಗೊಂಡಿದೆ ಎನಿಸಿದಲ್ಲಿ, ಅಲ್ಪಸಂಖ್ಯಾತರ ಹಿತರಕ್ಷಣೆಯ ನೆಪ ಮಾಡಿಕೊಂಡು ಕೇಂದ್ರ ಸರಕಾರವು ರಾಜ್ಯ ಸರಕಾರದ ಬೇಡಿಕೆಗೆ ಕಾಯದೆ, ತಾನೇ ನೇರವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.
- ಗುಜರಾತ್ ದಂಗೆ, ಒರಿಸ್ಸಾದ ಕಂದಮಾಲ್ ಗಲಭೆ, ಕರ್ನಾಟಕದಲ್ಲಿ ಚರ್ಚ್ ಮೇಲೆ ದಾಳಿ–ಇವೆಲ್ಲ ಪ್ರಸಂಗಗಳಲ್ಲಿ ಆಯಾ ರಾಜ್ಯಸರಕಾರಗಳು ನಿರ್ವಹಿಸಿದ ಪಾತ್ರ ತನಗೆ ಸಮಾಧಾನ ನೀಡಿರಲಿಲ್ಲ ಎಂದು ಕೇಂದ್ರ ಸರಕಾರವು ಅಪ್ರತ್ಯಕ್ಷವಾಗಿ ಹೊರಿಸುವ ಆರೋಪವಿದು ಎಂಬುದು ಸುಸ್ಪಷ್ಟ. ಮುಂದೆ ಇಂತಹ ಪ್ರಸಂಗಗಳಲ್ಲಿ ಕೇಂದ್ರ ಸರಕಾರವು – ವಿಶೇಷವಾಗಿ ತನ್ನ ವಿರೋಧಿ ಪಕ್ಷಗಳ ಸರಕಾರಗಳಿರುವಲ್ಲಿ – ಹೇಗೆ ನಡೆದುಕೊಳ್ಳುವುದೆಂಬುದರ ಪೂರ್ವ ಸಂಕೇತ ಕಣ್ಣಿಗೆ ರಾಚುವಂತೆ ಇದರಲ್ಲಿದೆ. ನಮ್ಮ ಒಕ್ಕೂಟ ಸಂರಚನೆಗೆ ಸುರಂಗವಿಡುವ ಅಪಾಯವಿರುವುದನ್ನು ಗುರುತಿಸಬೇಕಾದ ಅಗತ್ಯವಿದೆ.
- ಈ ಶಾಸನವನ್ನು ರೂಪಿಸುವುದರ ಹಿಂದೆ ಗುಜರಾತ್ ದಂಗೆ, ಒರಿಸ್ಸಾದ ಕಂದಮಾಲ್ ಹಿಂಸಾಚಾರ, ಇವುಗಳೇ ಪ್ರಮುಖವಾಗಿ ಇದೆಯೆಂದು ಮಸೂದೆಯ ಅವಲೋಕನದಿಂದ ಸಾಮಾನ್ಯರಿಗೂ ಗೊತ್ತಾಗುತ್ತದೆ. ಗುಜರಾತಿನಲ್ಲಿ ತಾನು ಪೂರಾ ಅಪ್ರಸ್ತುತಗೊಂಡಿದ್ದರೂ ಆ ರಾಜ್ಯ ಸರಕಾರಕ್ಕೆ ಅಂಕುಶ ಬಿಗಿಯಬೇಕೆಂಬ ಹಾಗೂ ಒರಿಸ್ಸಾದಲ್ಲಿ ಪುನಃ ಅಧಿಕಾರ ಗಳಿಸುವ ಸಲುವಾಗಿ ಅಲ್ಪಸಂಖ್ಯಾತರನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಬೇಕೆಂಬ ಇರಾದೆ ಕಾಂಗ್ರೆಸ್ಸಿಗೆ ಇರುವುದು ಇಲ್ಲಿ ಗಮನಿಸಬೇಕಾದ ಸಂಗತಿ.
- ಈ ಹಿಂದೆ ರಚಿಸಲಾಗಿದ್ದ ರಂಗನಾಥ ಮಿಶ್ರಾ ಆಯೋಗ, ಸಾಚಾರ್ ಆಯೋಗ ಮೊದಲಾದವುಗಳ ಸಾಲಿನಲ್ಲಿ, ಅದರ ಮುಂದುವರೆದ ಕ್ರಮವಾಗಿ ಈ ಶಾಸನ ಮಾಡಲು ಕೇಂದ್ರ ಸರಕಾರ ಮುಂದಾಗಿದೆ. 'ಹಿಂದು ಭಯೋತ್ಪಾದಕತೆ', ಇತ್ಯಾದಿ ಇಲ್ಲಸಲ್ಲದ ಭ್ರಮೆಗಳನ್ನು ಸೃಷ್ಟಿಸಿ ಅತ್ಯಧಿಕ ಪ್ರಚಾರ ಮಾಡುವುದು ಸಹ ಅದೇ ದುರುದ್ದೇಶದಿಂದ. ಹೆಚ್ಚುತ್ತಿರುವ ಹಿಂದುತ್ವದ ಶಕ್ತಿ ಮತ್ತು ಪ್ರಭಾವದಿಂದಾಗಿ ಕೇಂದ್ರ ಸರಕಾರವು ಚಿಂತಿತವಾಗಿರುವುದು ಸ್ಪಷ್ಟವಾಗಿ

ಕಾಣುತ್ತದೆ. ಅಣ್ಣಾ ಹಜ಼ಾರೆ, ಬಾಬಾ ರಾಮದೇವ್ ಅವರ ಹೋರಾಟ ಗಳೊಂದಿಗೆ ಸಹ ಸರಕಾರವು ಆರೆಸ್ಸೆಸ್ ಅನ್ನು ತಳಕು ಹಾಕುತ್ತಿರುವುದು ಇದೇ ಕಾರಣಕ್ಕಾಗಿ. ಇದೀಗ ಕಾನೂನಿನ ಮೂಲಕ ಹಿಂದುತ್ವದ ಶಕ್ತಿ ತಲೆಯೆತ್ತದಂತೆ ಮಾಡಲು ಸರಕಾರ ಹೊರಟಿದೆ.

- ಈ ಶಾಸನದಿಂದಾಗಿ ಯಾವುದೇ ಗುಂಪಿಗೆ ಲಾಭವಾಗುವುದಕ್ಕಿಂತ ಸಾಮಾಜಿಕ ವಿರಸ ಹೆಚ್ಚುವುದೇ ಸಂಭವನೀಯ. ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ನಿರಂತರ ಸಂಘರ್ಷ ಹೆಚ್ಚಾಗಿ ಒಕ್ಕೂಟ ವ್ಯವಸ್ಥೆಗೆ ಹಾನಿಯುಂಟಾಗ ಬಹುದು. ಅದೇ ರೀತಿಯಲ್ಲಿ ಈ ಶಾಸನದ ಮೂಲಕ ಸರಕಾರವೇ ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ವಿರುದ್ಧ ಎತ್ತಿಕಟ್ಟುತ್ತಿರುವ ಕಾರಣ ದಿಂದಾಗಿ ಮತೀಯ ಸಂಘರ್ಷಗಳು ಸಹ ಹೆಚ್ಚಬಹುದು.
- ಈ ಶಾಸನವನ್ನು ಕಾರ್ಯಾನ್ವಯ ಮಾಡಲು ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದು ವಿಶೇಷ ಪ್ರಾಧಿಕಾರವನ್ನು ರಚಿಸಲಾಗುತ್ತದೆ. ಈ ಪ್ರಾಧಿಕಾರದಲ್ಲಿ 7 ಸದಸ್ಯರಿದ್ದು, ಅವರಲ್ಲಿ ನಾಲ್ವರು ಅಲ್ಪಸಂಖ್ಯಾತರೇ ಆಗಿರುತ್ತಾರೆ. ಅದರ ಅಧ್ಯಕ್ಷ ಮತ್ತು ಉಪಾಧ್ಯಕ್ಷರಂತೂ ಅವರೇ ಆಗಿರುತ್ತಾರೆ. ಈ ಪ್ರಾಧಿಕಾರಕ್ಕೆ ಪೊಲೀಸ್, ಆಡಳಿತ ಮತ್ತು ನ್ಯಾಯಾಂಗ – ಈ ಮೂರೂ ವಿಧದ ಅಧಿಕಾರಗಳಿರುತ್ತವೆ. ಯಾರೇ ಒಬ್ಬ (ಅಲ್ಪಸಂಖ್ಯಾತ ವ್ಯಕ್ತಿ) ಸಲ್ಲಿಸಿದ ದೂರಿನಂತೆ ಆರೋಪಿ ಯಾಗಿರುವವನು – ಅವನು ಪೊಲೀಸ್, ಸರಕಾರಿ ಅಧಿಕಾರಿ ಅಥವಾ ಓರ್ವ ಹಿಂದು ನಾಗರಿಕನೇ ಇರಬಹುದು; ಆದರೂ ಆತನನ್ನು ಅಪರಾಧಿ ಎಂದೇ ಪರಿಗಣಿಸಲಾಗುವುದು. ಅವನಿಗೆ ವಿಧಿಸಲಾಗುವ ಶಿಕ್ಷೆ ಸುಮಾರಾಗಿ 'ಪೋಟಾ' ಕಾನೂನಿನ 58, 73 ಮತ್ತು 74ನೇ ವಿಧಿಗನುಗುಣವಾದ ಕಠಿಣಶಿಕ್ಷೆ – ಎಂದರೆ, ಹಿಂದೆ ನಾಜ಼ಿ ಜರ್ಮನಿಯಲ್ಲಿ ಯಹೂದಿಗಳು ಅನುಭವಿಸುತ್ತಿದ್ದರಲ್ಲ, ಆ ರೀತಿಯದಾಗಬಹುದು!
- ಈ ಶಾಸನವನ್ನು ಯೋಜಿಸಿ, ರಚಿಸಿದುದು ಸೋನಿಯಾ ಗಾಂಧಿ ನೇತೃತ್ವದ ರಾಷ್ಟ್ರೀಯ ಸಲಹಕಾರ ಮಂಡಳಿ. ಅದರಲ್ಲಿರುವ ಪ್ರಮುಖರೆಂದರೆ– ಅಸ್ಘರ್ ಆಲಿ ಇಂಜಿನಿಯರ್, ಹರ್ಷ ಮಂಡಲ್, ತೀಸ್ತಾ ಸೆಟಲ್‌ವಾಡ್, ಶಬನಮ್ ಹಶ್ಮಿ, ಜಾನ್ ದಯಾಳ್, ಉಪೇಂದ್ರ ಭಕ್ಷಿ, ಸೆಯ್ಯದ್ ಶಹಾಬುದ್ದೀನ್ ಅಂತಹ ಸೋನಿಯಾ ನಿಕಟವರ್ತಿಗಳು. ಮಾನವಾಧಿಕಾರ ಮತ್ತು ಸೆಕ್ಯುಲರ್ ವಾದಿಗಳ ಪಟಾಲಂ ಇದು. ಈ ಶಾಸನ ಪೂರಾ ಹಿಂದು ವಿರೋಧಿ ದುರುದ್ದೇಶದಿಂದ ಪ್ರೇರಿತವಾದುದೆಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿಯ ಅಗತ್ಯವಿದೆಯೇ?
- ವಾಸ್ತವಿಕವಾಗಿ ಅಲ್ಪಸಂಖ್ಯಾತರಿಗೆ ಭಾರತದಲ್ಲಿರುವಷ್ಟು ಸುರಕ್ಷತೆ ವಿಶ್ವದ ಇನ್ನಾವ ದೇಶದಲ್ಲೂ ಇಲ್ಲ. ನಮ್ಮ ದೇಶದ ಇತಿಹಾಸದ ಸಾಕ್ಷಿ ಇದೆ ಅದಕ್ಕೆ. ಆದರೆ, ಇಲ್ಲಿ ಅವರಿಗೆ ಸುರಕ್ಷತೆಯೇ ಇಲ್ಲ ಎಂಬಂತಹ ಭ್ರಮೆ ನಿರ್ಮಿಸುವ

ಹೀನ ಮಾನಸಿಕತೆ ಈ ಶಾಸನದಲ್ಲಿದೆ. ಮತ್ತು ಕೇಂದ್ರ ಸರಕಾರದ ಪ್ರತಿಮೆಗೇ ಕಳಂಕ ಹಚ್ಚುವಂತಹ ನಾಚಿಕೆಗೇಡಿನ ಸಂಗತಿಯಿದು ಎಂದು ಸರಕಾರಕ್ಕೆ ಅನ್ನಿಸದಿರುವುದು ಆಶ್ಚರ್ಯವೇ!

- ಈ ವಿಧೇಯಕವು ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕೃತವಾಗುವುದೇ? ಮುಂದೆ ರಾಷ್ಟ್ರಪತಿಯವರ ಅಂಕಿತ ಅದಕ್ಕೆ ದೊರೆತು ಅದು ಶಾಸನವಾಗುವುದೇ? ಅಕಸ್ಮಾತ್ ಶಾಸನವಾದರೂ ಸಂವಿಧಾನಾತ್ಮಕವಾಗಿ ಸರ್ವೋಚ್ಚ ನ್ಯಾಯಾಲಯದ ವಿಮರ್ಶೆಗೆ ಒಳಗಾಗಲಾರದೇ? ಇತ್ಯಾದಿ... ಕಾದು ನೋಡಬೇಕಾದ ಸಂಗತಿಗಳು.

ಆದರೆ, ಕಾನೂನು ಆದ ಮಾತ್ರದಿಂದಲೇ ಸಮಸ್ಯೆ ಪರಿಹಾರವಾಗುವುದೇ? ಭಾರತದಲ್ಲಿ ಅಲ್ಪಸಂಖ್ಯಾತರಿಗೆ ನೆಮ್ಮದಿಯ, ಸುರಕ್ಷಿತ ಬದುಕಿನ ಅವಕಾಶವಾಗಿರುವುದು ಬಹುಸಂಖ್ಯಾತ ಹಿಂದುಗಳ ಆತ್ಮೀಯ ಹಾಗೂ ಸೌಹಾರ್ದಪೂರ್ಣ ಮನೋಧರ್ಮ ಮತ್ತು ವ್ಯವಹಾರದಿಂದಾಗಿ ಎಂಬುದು ಅಲ್ಲಗಳೆಯಲಾಗದ ಸಂಗತಿ. ಇಲ್ಲಿ ಆಗಾಗ ಶಾಂತಿ ಭಂಗವಾಗುತ್ತಿರುವುದಕ್ಕೆ ಕಾರಣ, ಅಲ್ಪಸಂಖ್ಯಾತರು ಮಾಡುವ ಗೋವಧೆ, ಮತಾಂತರ, ಮಂದಿರಗಳ ನಾಶ ಇತ್ಯಾದಿಗಳ ಮೂಲಕ ಬಹುಸಂಖ್ಯಾತರ ಭಾವನೆಗಳನ್ನು ನೋಯಿಸುವ ಕಾರಣದಿಂದ ಎಂಬುದು ಗೊತ್ತಿಲ್ಲದ ಸಂಗತಿಯೇನಲ್ಲ.

ಪ್ರಸ್ತುತ ಶಾಸನದ ಮೂಲಕ ಸರಕಾರವೇ ಅಲ್ಪಸಂಖ್ಯಾತರನ್ನು ಅಂತಹ ಕೃತ್ಯಗಳಿಗೆ ಇನ್ನಷ್ಟು ಪ್ರೋತ್ಸಾಹಿಸಿದಂತೆ ಆಗುವುದು ಖಂಡಿತ. ಅವರಲ್ಲಿನ ಮತಾಂಧ, ಮೂಲಭೂತವಾದಿಗಳಿಗೆ ತಮ್ಮ ಕೈಬಲಗೊಂಡಂತೆ ಅನ್ನಿಸಲೂಬಹುದು. ಆದರೆ, ತಮ್ಮ ದೇಶದಲ್ಲಿ ತಮಗೇ ಸುರಕ್ಷತೆ ಇಲ್ಲ ಎನ್ನಿಸಿದಾಗ, ಹಿಂದುಗಳು ಸಿಡಿದೆದ್ದರೆ ಸರಕಾರದಿಂದಾಗಲೀ, ಇನ್ನಾವುದೇ ವಿಧದ ಶಕ್ತಿಯಿಂದಾಗಲೀ ಅಲ್ಪಸಂಖ್ಯಾತರ ರಕ್ಷಣೆಯಾಗಲಾರದು ಎಂಬುದನ್ನು ಅವರು ತಿಳಿದಿರುವುದು ಉಚಿತ. ಹಾಗೆಯೇ ಈ ಶಾಸನ ರಚನೆಗೆ ಹೊರಟಿರುವವರೂ ಇದನ್ನು ಮನಗಾಣುವುದು ಸೂಕ್ತ.

# ದೇಶದ ಹಿತಕ್ಕೆ ಮಾರಕ

■ ನ್ಯಾ। ಎಂ. ರಾಮಾಜೋಯಿಸ್

ಕೋಮು ಸಂಘರ್ಷ ಮತ್ತು ಉದ್ದೇಶಿತ ಘರ್ಷಣೆ ನಿಯಂತ್ರಣ (ನ್ಯಾಯ ಮತ್ತು ನಷ್ಟ ಪರಿಹಾರ ಪಡೆಯಲು ಹಕ್ಕುಳ್ಳ) ಮಸೂದೆ- 2011 ನಿಜಕ್ಕೂ ಚಕಿತಗೊಳಿಸುತ್ತಿದೆ. ಈ ಮಸೂದೆ ಸ್ಪಷ್ಟವಾಗಿ ಸಮಾನತೆಯ ಹಕ್ಕನ್ನು ಮತ್ತು ಸಂವಿಧಾನದ 15(1)ವಿಧಿಯನ್ವಯದ ವಿವೇಚನಾ ಹಕ್ಕನ್ನು ಉಲ್ಲಂಘಿಸುತ್ತದೆ. ಈ ವಿಚಾರ ಮಸೂದೆಯನ್ನು ರಚಿಸಿದಂಥ ರಾಷ್ಟ್ರೀಯ ಸಲಹಾ ಸಮಿತಿಯ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಗಮನಕ್ಕೂ ಬಂದಿರುತ್ತದೆ. ಆದರೆ ಭಾರತೀಯ ಸಂವಿಧಾನವನ್ನು ಎತ್ತಿ ಹಿಡಿಯುವುದಾಗಿ ಪ್ರಮಾಣ ವಚನ ಸ್ವೀಕರಿಸಿದಂಥ ಸೋನಿಯಾ ಗಾಂಧಿ ಮತ್ತು ಕೇಂದ್ರ ಸರ್ಕಾರದ ನಾಯಕ ಪ್ರಧಾನಿ ಮನಮೋಹನ್ ಸಿಂಗ್ ಅವರು ಇದನ್ನು ಉಲ್ಲಂಘಿಸಿದ್ದಾರೆ ಎಂದೇ ಸ್ಪಷ್ಟವಾಗಿ ಹೇಳಬಹುದು. ಜೊತೆಗೆ ಈ ಪ್ರಮಾಣವಚನವನ್ನು ಚಿಪ್ಪಿನೊಳಗೆ ಹುದುಗಿಸಿಡುವುದಕ್ಕಾಗಿಯೇ ಎಂಬಂತೆ ರಚಿಸಲಾದಂಥ ಈ ಮಸೂದೆ ಜಾತೀಯ ಅಲ್ಪಸಂಖ್ಯಾತರು ಮತ್ತು ಅವರನ್ನೊಳಗೊಂಡ ಸಂಘಟನೆಗಳು, ಗುಂಪುಗಳು ಬಹುಸಂಖ್ಯಾತರ ಜೀವ ಮತ್ತು ಆಸ್ತಿಯ ವಿರುದ್ಧ ನಡೆಸುವಂಥ ಅಪರಾಧೀ ಕೃತ್ಯಗಳಿಗೆ ಸಂಪೂರ್ಣ ವಿನಾಯಿತಿ ನೀಡುವ ಉದ್ದೇಶವನ್ನು ಹೊಂದಿದೆ. ಆದರೆ, ಇದೇ ಸಂದರ್ಭದಲ್ಲಿ ಬಹು ಸಂಖ್ಯಾತರಿಗೆ ಶಿಕ್ಷೆ ವಿಧಿಸಿ, ಅವರಿಂದಲೇ ದಂಡ ಕಕ್ಕಿಸಿ ಅದನ್ನು ಅಲ್ಪಸಂಖ್ಯಾತ ಗುಂಪುಗಳಿಗೆ ನೀಡುವುದಕ್ಕೆ ಈ ಮಸೂದೆ ಅವಕಾಶ ಮಾಡಿಕೊಡುತ್ತಿದೆ.

ಈ ಮಸೂದೆಯನ್ನು ಕಾನೂನಾಗಿ ಅಂಗೀಕರಿಸುವುದು, ಸಂಸತ್ತಿನಲ್ಲಿ ಈ ಮಸೂದೆಗೆ ಅನುಮೋದನೆ ಕೊಡುವುದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಹೀಗಾಗಿ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವುದಕ್ಕೂ ಅವಕಾಶ ಮಾಡಿ ಕೊಡಬಾರದು. ಭಾರತದ ಜನರನ್ನು ಜಾತಿ ಆಧಾರದಲ್ಲಿ ಒಡೆಯಬೇಕು ಎಂಬುದು ಕಾಂಗ್ರೆಸ್‌ನ ಧ್ಯೇಯ ಮತ್ತು ಈ ಧ್ಯೇಯಕ್ಕೆ ತಕ್ಕಂತೆಯೇ ರೂಪಿಸಲಾದ ಈ ಮಸೂದೆ ಜನರನ್ನು ಜಾತಿ ಆಧಾರದಲ್ಲಿ ಒಡೆಯುವುದಕ್ಕಿಂತಲೂ ಹೆಚ್ಚಿನ ಅಪಾಯವನ್ನು ಸೃಷ್ಟಿ ಮಾಡಲಿದೆ. ವಿಭಜನೆಯಿಂದಾಗಿ ಒಂದು ಭಾಗವನ್ನು ಭಾರತ ಕಳೆದುಕೊಳ್ಳಬೇಕಾಯಿತು. ಆದರೆ ಈ ಅನಾರೋಗ್ಯಪೂರ್ಣ ಮಸೂದೆಯಿದೆಯಲ್ಲ, ಭಾರತಮಾತೆಯ ಮಕ್ಕಳೆಲ್ಲರು ಜಾತಿ ಆಧಾರದಲ್ಲಿ ವಿಭಜನೆಗೊಳ್ಳುವಂತೆ ಮಾಡುತ್ತದೆ. ಜೊತೆಗೆ ಅಲ್ಪಸಂಖ್ಯಾತ ವರ್ಗಗಳ ಉಗ್ರಗಾಮಿ ಮತ್ತು ಸದಾ ಘರ್ಷಣೆಯನ್ನೇ

ಬಯಸುವಂಥ ಸಂಘಟನೆಗಳು ಬಹುಸಂಖ್ಯಾತರ ವಿರುದ್ಧ ಯಾವ ಭೀತಿಯೂ ಇಲ್ಲದೆ ಸಂಘರ್ಷ ನಡೆಸುವುದಕ್ಕೆ ಎಡೆ ಮಾಡಿಕೊಡುತ್ತದೆ.

'ಗುಂಪು' ಮತ್ತು 'ಕೋಮುಪ್ರಚೋದಿತ ಘರ್ಷಣೆ' ಎಂಬ ಪದಗಳಿಗೆ ಮಸೂದೆಯಲ್ಲಿ ಕೊಟ್ಟಂಥ ವ್ಯಾಖ್ಯಾನವೇ ಈ ಮಸೂದೆಯ ಉದ್ದೇಶವನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ–

'ಗುಂಪು' ಎಂದರೆ ಭಾರತದ ಯಾವುದೇ ರಾಜ್ಯದಲ್ಲಿ ಇರಬಹುದಾದಂಥ ಧಾರ್ಮಿಕ ಅಥವಾ ಭಾಷಿಕ ಅಲ್ಪಸಂಖ್ಯಾತ ಸಮುದಾಯ ಅಥವಾ ಪರಿಶಿಷ್ಟ ಜಾತಿ ಮತ್ತು ಪಂಗಡ. ಒಟ್ಟಿನಲ್ಲಿ ಭಾರತೀಯ ಸಂವಿಧಾನದ 277ನೇ ವಿಧಿಯ 24 ಮತ್ತು 25ನೇ ಪರಿಚ್ಛೇದಕ್ಕೆ ಒಳಪಡುವಂಥ ಸಮೂಹ.

'ಕೋಮು ಪ್ರಚೋದಿತ ಘರ್ಷಣೆ' ಎಂದರೆ ಯಾವುದೇ ಪೂರ್ವಯೋಜಿತ ಅಥವಾ ಕ್ಷಿಪ್ರ ರೀತಿಯಲ್ಲಿ ಈ 'ಗುಂಪು'ಗಳಿಗೆ ಒಳಪಡುವಂಥ ವ್ಯಕ್ತಿಯ ಅಥವಾ ಆಸ್ತಿಯ ಅಥವಾ ಎರಡರ ಮೇಲೂ ನಡೆಯುವಂಥ ಯಾವುದೇ ಸ್ವರೂಪದ ಹಲ್ಲೆ. ಇದು ರಾಷ್ಟ್ರೀಯ ಜಾತ್ಯತೀತತೆಯನ್ನು ಹಾಳುಗೆಡವುತ್ತದೆ.

ಮಸೂದೆಯ ವಿವಿಧ ನಿಬಂಧನೆಗಳಲ್ಲಿ ಈ ಮೇಲಿನ ವ್ಯಾಖ್ಯಾನಗಳನ್ನು ಉಲ್ಲೇಖಿಸಲಾಗಿದ್ದು, ಕೋಮುಸಂಘರ್ಷ ಮತ್ತು ಉದ್ದೇಶಿತ ಘರ್ಷಣೆ ಅಲ್ಪಸಂಖ್ಯಾತರ ವಿರುದ್ಧ ಮಾತ್ರ ನಡೆಯುತ್ತದೆ ಮತ್ತು ಬಹುಸಂಖ್ಯಾತವರ್ಗ ಮಾತ್ರ ಇಂಥ ಘರ್ಷಣೆಗಳನ್ನು ನಡೆಸುತ್ತದೆ ಎಂದು ಮಸೂದೆಯಲ್ಲಿ ಭಾವಿಸಿದಂತಿದೆ. ಬಹುಸಂಖ್ಯಾತ ವರ್ಗ ಅಲ್ಪಸಂಖ್ಯಾತ ವರ್ಗದ ಮೇಲೆ ಹಿಂಸೆ ನಡೆಸುತ್ತದೆ ಎಂದು ಭಾವಿಸುವುದು ಅಸಂಬದ್ಧವಾದುದು. ಹೀಗಾಗಿ ಈ ಮಸೂದೆಯನ್ನು ರಚಿಸಿದವರು ಅದೆಷ್ಟು ಅವಿವೇಕಿಗಳು, ಅಸಮಂಜಸರು ಮತ್ತು ಸ್ವೇಚ್ಛಾಚಾರಿಗಳು ಎಂಬುದನ್ನು ಗಮನಿಸಲು ಮಸೂದೆಯ ವಿವಿಧ ನಿಯಮಗಳನ್ನು ಪರಿಶೀಲಿಸಬೇಕಾದ ಅಗತ್ಯವೇ ಇಲ್ಲ.ಭಾರತದ ಸಂವಿಧಾನದ ಪೀಠಿಕೆಯಲ್ಲಿಯೇ ಹೇಳಲಾದಂಥ ಮತ್ತು ಜನರಲ್ಲಿರಬೇಕಾದ ಶ್ರೇಷ್ಠಾತಿಶ್ರೇಷ್ಠ ಗುಣಗಳಾದ ರಾಷ್ಟ್ರೀಯ ಭಾವೈಕ್ಯತೆ ಮತ್ತು ಭ್ರಾತೃತ್ವವನ್ನು ನಾಶ ಮಾಡುವ ಉದ್ದೇಶವನ್ನೇ ಈ ಮಸೂದೆ ಹೊಂದಿದೆ ಎಂಬುದೂ ಸ್ಪಷ್ಟವಾಗುತ್ತದೆ. ಅಲ್ಲದೆ ಈ ಮಸೂದೆಯಲ್ಲಿನ ವಿಧಿಗಳು ಸಂಯುಕ್ತ ಸ್ವರೂಪವನ್ನು ಛಿದ್ರ ಮಾಡಿ ರಾಜ್ಯಗಳು ಕೇಂದ್ರದ ಅಧೀನ ಎಂದು ಹೇಳಲು ಹೊರಟಂತಿದೆ.

ಒಟ್ಟಿನಲ್ಲಿ ಈ ಮಸೂದೆ ಅಸಾಂವಿಧಾನಿಕ ಎಂಬುದು ಸ್ಪಷ್ಟ. ಸುಪ್ರೀಂ ಕೋರ್ಟ್‌ನಲ್ಲೂ ಇಂಥದ್ದೇ ಒಂದು ಕೇಸಿತ್ತು (ರಾಜಸ್ಥಾನ ಮತ್ತು ಠಾಕೂರ್ ಪ್ರತಾಪ್ ಸಿಂಗ್ ನಡುವಿನ ಪ್ರಕರಣ) ಮತ್ತು ಇಂಥದ್ದೇ ವಿವರಣೆಗಳೊಂದಿಗೆ ಇದು ಸಂವಿಧಾನದ 15ನೇ ವಿಧಿಯ ಉಲ್ಲಂಘನೆ ಎಂದು ಸ್ಪಷ್ಟವಾಗಿ ಹೇಳಲಾಗಿತ್ತು.

ಸಂವಿಧಾನದ ವಿಧಿವಿಧಾನಗಳು ಜಾರಿಯಾದ ತಕ್ಷಣ ರಾಜಸ್ಥಾನ ಸರ್ಕಾರ ಭಾರತೀಯ ಪೊಲೀಸ್ ಕಾಯ್ದೆಯ 15(5)ವಿಧಿಯ ಅಡಿಯಲ್ಲಿ ಒಂದು ಸುತ್ತೋಲೆ

ಯನ್ನು ಹೊರಡಿಸಿತು. ಈ ಸುತ್ತೋಲೆಯ ಪ್ರಕಾರ ಕೆಲವೊಂದು ಹಳ್ಳಿಗಳಲ್ಲಿ ಹೆಚ್ಚುವರಿ ಪೊಲೀಸ್ ಪಡೆಯ ವೆಚ್ಚವನ್ನು ಮುಸ್ಲಿಮರು ಮತ್ತು ಹರಿಜನರಿಗೆ ಮನ್ನಾ ಮಾಡಿತು.ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ಈ ಅಧಿಸೂಚನೆಯನ್ನು ರದ್ದುಗೊಳಿಸಿತು. ಈ ಆದೇಶದ ಪ್ರಮುಖ ಭಾಗ ಹೀಗಿದೆ–

ವಿನಾಯಿತಿಯನ್ನು ಸಮರ್ಥಿಸಿಕೊಂಡು ರಾಜಸ್ಥಾನ ಸರ್ಕಾರ ಹೀಗೆ ಹೇಳಿತು:

ವಿವಿಧ ಹಳ್ಳಿಗಳಲ್ಲಿ ಮುಸ್ಲಿಮರು ಮತ್ತು ಹರಿಜನರಿಗೆ ಹೆಚ್ಚುವರಿ ಪೊಲೀಸ್ ವೆಚ್ಚದಿಂದ ವಿನಾಯಿತಿ ನೀಡಿದ್ದು ಅವರ ಜಾತಿಯ ಕಾರಣದಿಂದಲ್ಲ. ಆದರೆ ಅವರು ಶಾಂತಿಪ್ರಿಯರು ಮತ್ತು ಕಾನೂನನ್ನು ಚಾಚೂ ತಪ್ಪದೆ ಪಾಲಿಸುವವರು ಎಂದು ಕಂಡುಬಂದದ್ದರಿಂದ ಈ ವಿನಾಯಿತಿ ನೀಡಲಾಗಿದೆ. 24 ಹಳ್ಳಿಗಳಲ್ಲಿ ಹೆಚ್ಚುವರಿ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದೆ...

ಇದಕ್ಕೆ ಪ್ರತಿಯಾಗಿ ಸುಪ್ರೀಂಕೋರ್ಟ್ ತನ್ನ ಆದೇಶದಲ್ಲಿ ಹೀಗೆ ಹೇಳಿತು:

ರಾಜ್ಯ ಸರ್ಕಾರ ಹೇಳುವ ಪ್ರಕಾರ ಮುಸ್ಲಿಮರು ಮತ್ತು ಹರಿಜನರು ಮಾತ್ರ ಶಾಂತಿಪ್ರಿಯರು ಮತ್ತು ಕಾನೂನನ್ನು ಚಾಚೂ ತಪ್ಪದೆ ಪಾಲಿಸುವವರು. ಹಾಗಿದ್ದರೆ ಇತರ ಸಮುದಾಯಗಳಲ್ಲಿ ಶಾಂತಿಪ್ರಿಯರು ಮತ್ತು ಕಾನೂನನ್ನು ಚಾಚೂ ತಪ್ಪದೆ ಪಾಲಿಸುವ ಜನರೇ ಇಲ್ಲವೇ? ಹಾಗೊಂದು ವೇಳೆ ಸರ್ಕಾರ ಸೀಮಿತ ವರ್ಗವನ್ನು ಮಾತ್ರ ಶಾಂತಿಪ್ರಿಯರು ಮತ್ತು ಕಾನೂನನ್ನು ಚಾಚೂ ತಪ್ಪದೆ ಪಾಲಿಸುವವರು ಎಂದು ಪರಿಗಣಿಸುವುದಾದರೆ ಅದು ಇತರ ಸಮುದಾಯಗಳಲ್ಲಿನ ಶಾಂತಿಪ್ರಿಯರು ಮತ್ತು ಕಾನೂನನ್ನು ಚಾಚೂ ತಪ್ಪದೆ ಪಾಲಿಸುವವರಿಗೆ ಎಸಗಿದ ಅಪಚಾರ ವಾಗುತ್ತದೆ. ಅಲ್ಲದೆ ಮುಸ್ಲಿಮ್ ಮತ್ತು ಹರಿಜನ ಸಮುದಾಯದಲ್ಲಿನ ಪ್ರತಿಯೊಬ್ಬರು ಕೂಡಾ ಶಾಂತಿಪ್ರಿಯರು ಮತ್ತು ಕಾನೂನನ್ನು ಚಾಚೂ ತಪ್ಪದೆ ಪಾಲಿಸುವವರು ಎಂದು ಭಾವಿಸುವುದು ಕೂಡಾ ಇನ್ನೊಂದು ವರ್ಗಕ್ಕೆ ಮತ್ತು ರಾಷ್ಟ್ರಹಿತಾಸಕ್ತಿಗೆ ಅಪಚಾರ ಎಸಗಿದಂತೆಯೇ ಸರಿ.ಅಂದರೆ ಮುಸ್ಲಿಮರು ಮತ್ತು ಹರಿಜನರ ಪರವಾಗಿ ಈ ಅಧಿಸೂಚನೆ ಹೊರಡಿಸಿರುವುದು ಜಾತಿ ಆಧಾರದಲ್ಲಿದೆಯೇ ಹೊರತು ಇನ್ಯಾವುದೇ ವಿಚಾರ ಇಲ್ಲ.ಬೇರೆ ಯಾವುದೇ ಉದ್ದೇಶ ಇದ್ದಿದ್ದರೂ ಸಹ ಅದನ್ನು ಅಧಿಸೂಚನೆಯಲ್ಲಿ ಕಾಣಿಸಬೇಕಾಗಿತ್ತು. ಈ ಅಧಿಸೂಚನೆಯು ಸಂವಿಧಾನದ 15(1) ವಿಧಿಗೆ ವಿರುದ್ಧವಾದದ್ದು ಎಂಬುದು ಸ್ಪಷ್ಟವಾಗುತ್ತದೆ ಮತ್ತು ಅಧಿಸೂಚನೆಯ 4ನೇ ಪ್ಯಾರಾ ನಿರ್ದಿಷ್ಟ ಸಾಂವಿಧಾನಕ ನಿಷೇಧವನ್ನು ಉಲ್ಲಂಘಿಸಿದೆ. ಹೈಕೋರ್ಟ್‌ನಲ್ಲಿ ಈ ಬಗ್ಗೆ ದಾವೆ ವಿಚಾರಣೆಗೆ ಬಂದಾಗಲೂ ಇದೇ ಅಂಶಗಳನ್ನು ಉಲ್ಲೇಖಿಸ ಲಾಗಿತ್ತು ಮತ್ತು ನಮ್ಮ ಪ್ರಕಾರ ಹೈಕೋರ್ಟ್‌ನ ನ್ಯಾಯಮೂರ್ತಿಗಳು ನೀಡಿದಂಥ ವಿವರಣೆಗಳು ಮತ್ತು ರಾಜ್ಯ ಸರ್ಕಾರದ ಅಧಿಸೂಚನೆಯನ್ನು ರದ್ದುಗೊಳಿಸಿದ್ದು ಸರಿಯಾಗಿದೆ.

ಈಗ ಕೇಂದ್ರ ಸರ್ಕಾರ ಮಂಡಿಸಲು ಹೊರಟಿರುವ ಮಸೂದೆ ಹಳೇ ಕಾಯಿಲೆಗಳು ವಾಸಿಯಾಗುವುದಿಲ್ಲ ಎಂಬುದನ್ನು ಸಾಬೀತುಪಡಿಸಲು ಹೊರಟಂತಿದೆ. ಇಂತಿರುವಾಗ ಸುಪ್ರೀಂಕೋರ್ಟ್‌ನ ಆದೇಶವನ್ನು ಆಧಾರವಾಗಿಟ್ಟುಕೊಂಡು, ಕೋಮು ಸಂಘರ್ಷ ಮತ್ತು ಉದ್ದೇಶಿತ ಘರ್ಷಣೆ ನಿಯಂತ್ರಣ ಮಸೂದೆ ತಿರಸ್ಕಾರ ಯೋಗ್ಯ ಎಂಬುದು ಸ್ಪಷ್ಟ.

---

ಲೇಖಕರು : ಪಂಜಾಬ್–ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು

# ಬಹುಸಂಖ್ಯಾತರಷ್ಟೇ ಅಪರಾಧಿಗಳಾಗುತ್ತಾರೆ!

■ ಅರುಣ್ ಜೇಟ್ಲಿ

**ಕೋ**ಮು ಹಿಂಸಾಚಾರ ಮತ್ತು ಉದ್ದೇಶಪೂರ್ವಕ ದಾಳಿ (Communal Violence Bill) ಮಸೂದೆ 2011 ಎಂಬ ಹೆಸರಿನ ಕಾಯ್ದೆ ಜಾರಿಗೊಳಿಸಲು ಉದ್ದೇಶಿಸಲಾಗಿದ್ದು ಅದರ ಕರಡು ಪ್ರತಿಯನ್ನು ಸಾರ್ವಜನಿಕ ಚರ್ಚೆಗೆ ಒದಗಿಸಲಾಗಿದೆ. ಈ ಕರಡು ಮಸೂದೆಯು ಮೇಲ್ನೋಟಕ್ಕೆ ದೇಶದಲ್ಲಿ ಕೋಮು ಹಿಂಸಾಚಾರವನ್ನು ತಡೆಗಟ್ಟುವ ಮತ್ತು ಇದಕ್ಕೆ ಕಾರಣಕರ್ತರಾಗುವವರನ್ನು ಶಿಕ್ಷಿಸುವ ಉದ್ದೇಶವನ್ನು ಹೊಂದಿರುವಂತೆ ಕಾಣುತ್ತದೆ. ಆದರೆ ಸರಿಯಾಗಿ ಪರಾಮರ್ಶಿಸಿದರೆ ಈ ಮಸೂದೆಯು ಭಾರತದ ಒಕ್ಕೂಟ ಸ್ವರೂಪಕ್ಕೆ ಧಕ್ಕೆಯನ್ನು ತಂದು, ದೇಶದಲ್ಲಿನ ಅಂತರಧರ್ಮೀಯ ಹಾಗೂ ಅಂತರ್ ಸಮುದಾಯದ ಬಾಂಧವ್ಯದಲ್ಲಿ ಮತ್ತಷ್ಟು ಅಸಮತೋಲನವನ್ನು ಉಂಟುಮಾಡಲಿದೆ. ಜತೆಗೇ ಇದು ಬಹುಸಂಖ್ಯಾತರ ಪಾಲಿಗೆ ತುಂಬಾ ಮಾರಕವಾಗಲಿದೆ.

**ಮಸೂದೆಯ ಪರಿಣಾಮವೇನಾಗಲಿದೆ ?**

ಈ ಮಸೂದೆಯಲ್ಲಿ ಅತ್ಯಂತ ಮುಖ್ಯವಾದ ಪದವೆಂದರೆ ಸಮೂಹ, ಅಥವಾ ಗುಂಪು (ಗ್ರೂಪ್) ಎಂಬುದಾಗಿದೆ. ಆದರೆ ಇದು ಬಹಳ ವಿಸ್ತಾರ ಅರ್ಥವನ್ನು ಹೊಂದಿದೆ. ಇದು ಅಲ್ಪಸಂಖ್ಯಾತ ಅಥವಾ ಪ.ಜಾತಿಗಳ ಮತ್ತು ಪ.ಪಂಗಡಗಳ ಗುಂಪನ್ನೂ ಸೂಚಿಸಬಹುದು. ಮಸೂದೆಯ 2ನೇ ಅಧ್ಯಾಯದಲ್ಲಿ ಹೊಸ ಅಪರಾಧಗಳ ಪಟ್ಟಿ ಸೃಷ್ಟಿಸಲಾಗಿದೆ. ಈ ಮಸೂದೆಯಲ್ಲಿ ನಮೂದಿಸಲಾಗಿರುವ ಅಪರಾಧಗಳು, ಈಗಾಗಲೇ ಪ.ಜಾತಿ/ಪ.ಪಂಗಡ (ದೌರ್ಜನ್ಯ ತಡೆ) ಕಾಯ್ದೆ 1989ರಲ್ಲಿ ನಮೂದಿಸಲಾಗಿರುವ ಅಪರಾಧಗಳಿಗಿಂತ ಪ್ರತ್ಯೇಕವಾಗಿವೆ ಎಂದು ಕರಡು ಮಸೂದೆಯ 6ನೇ ವಿಧಿ (ಅಧಿನಿಯಮ) ಹೇಳುತ್ತದೆ. ಹಾಗಾದರೆ ಒಂದೇ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಗೆ ಎರಡು ಬಾರಿ ಶಿಕ್ಷೆಯನ್ನು ನೀಡಬಹುದೆ? ಒಬ್ಬ ವ್ಯಕ್ತಿ ಅಥವಾ ಒಂದು 'ಗುಂಪಿನ' ಸದಸ್ಯರಾಗಿರುವ ಕಾರಣಕ್ಕೆ ಅವರ ಮೇಲೆ ಇನ್ನೊಬ್ಬ ವ್ಯಕ್ತಿಯು ಲೈಂಗಿಕ ಕ್ರಿಯೆ ನಡೆಸಿದರೆ ಅದನ್ನು ಲೈಂಗಿಕ ಹಲ್ಲೆ ಎಂದು ಪರಿಗಣಿಸಲಾಗುವುದು ಎಂದು 7ನೇ ವಿಧಿ ತಿಳಿಸುತ್ತದೆ. ಒಬ್ಬ ವ್ಯಕ್ತಿಯು ಮೌಖಿಕವಾಗಿ, ಲಿಖಿತದಲ್ಲಿ ಅಥವಾ ಸಂಜ್ಞೆಯ ಮೂಲಕ ಒಂದು 'ಗುಂಪಿನ' ಬಗ್ಗೆ ಅಥವಾ ಆ 'ಗುಂಪಿಗೆ' ಸೇರಿದ ವ್ಯಕ್ತಿಯ ಬಗ್ಗೆ ಮಾಡುವ 'ಅಪಪ್ರಚಾರ' ಅಪರಾಧವಾಗುತ್ತದೆ

ಎಂದು 8ನೇ ವಿಧಿ ಹೇಳುತ್ತದೆ. ಕೋಮು ಹಿಂಸಾಚಾರ ಮತ್ತು  ನೈಜ ಗುರಿ ಹೊಂದಿದ ಹಿಂಸಾಚಾರ ಅಪರಾಧ ಎಂದು 9ನೇ ವಿಧಿ ತಿಳಿಸುತ್ತದೆ. ಒಂದು 'ಗುಂಪಿನ' ವಿರುದ್ಧ ನಡೆಯುವ ಅಪರಾಧಗಳಿಗೆ ಬೆಂಬಲ ನೀಡಲು ಅಥವಾ ಆ 'ಗುಂಪಿನ' ಕಾರ್ಯಚಟುವಟಿಕೆಗಳನ್ನು ಮುಂದುವರೆಸಲು ಹಣಕಾಸು ಬೆಂಬಲ ನೀಡುವುದು ಮತ್ತು ಖರ್ಚು ಮಾಡುವುದು ಅಪರಾಧ ಎಂದು 10ನೇ ವಿಧಿ ಹೇಳುತ್ತದೆ. ಒಂದು 'ಗುಂಪಿಗೆ' ಸೇರಿದ ವ್ಯಕ್ತಿಯನ್ನು ದೈಹಿಕ, ಮಾನಸಿಕ ಯಾತನೆಗೆ ಅಥವಾ ನೋವಿಗೆ ಗುರಿಪಡಿಸುವ ಸಾರ್ವಜನಿಕ ಸೇವಕರು ಶಿಕ್ಷಾರ್ಹರು ಎಂದು 12ನೇ ವಿಧಿ ತಿಳಿಸುತ್ತದೆ. ಈ ಮಸೂದೆಯಲ್ಲಿ ಪಟ್ಟಿ ಮಾಡಲಾಗಿರುವ ಅಪರಾಧ ಗಳಿಗೆ ಸಂಬಂಧಿಸಿದಂತೆ ತಮ್ಮ ಕಾರ್ಯನಿರ್ವಹಣೆಯಲ್ಲಿ ಕರ್ತವ್ಯಲೋಪ ತೋರುವ ಸಾರ್ವಜನಿಕ ಸೇವಕರು ಶಿಕ್ಷಾರ್ಹರು ಎಂದು 13ನೇ ವಿಧಿ ಹೇಳುತ್ತದೆ. ಸಶಸ್ತ್ರ ಪಡೆಗಳನ್ನು ಅಥವಾ ಭದ್ರತಾ ಪಡೆಗಳನ್ನು ನಿರ್ವಹಿಸುವ ಸಾರ್ವಜನಿಕ ಸೇವಕರು ತಮ್ಮ ವ್ಯಾಪ್ತಿಯಲ್ಲಿನ ಜನರ ಮೇಲೆ ಹತೋಟಿಯನ್ನು ಸಾಧಿಸುವಲ್ಲಿ ಮತ್ತು ತಮ್ಮ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ದಿಸೆಯಲ್ಲಿ ವಿಫಲರಾಗುವುದು ಅಪರಾಧ ಎಂದು 14ನೇ ವಿಧಿ ತಿಳಿಸುತ್ತದೆ. ಭೀತಿ ಹುಟ್ಟಿಸುವ ಹೊಣೆಗಾರಿಕೆಯ ತತ್ವವನ್ನು 15ನೇ ವಿಧಿ ವಿಸ್ತರಿಸುತ್ತದೆ. ಒಬ್ಬ ವ್ಯಕ್ತಿ ಅಥವಾ ಪದಾಧಿಕಾರಿ ತನ್ನ ಅಧೀನದಲ್ಲಿರುವ ಅಥವಾ ಮೇಲ್ವಿಚಾರಣೆಯಲ್ಲಿರುವ ಸದಸ್ಯರನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವಲ್ಲಿ ವಿಫಲರಾದರೆ ಅವರಿಂದಲೆ ಅಪರಾಧ ಜರುಗಿದಂತೆ ಎಂದು ಭಾವಿಸಲಾಗುತ್ತದೆ. ಇನ್ನೊಬ್ಬರು ಅಪರಾಧದಲ್ಲಿ ಪಾಲುಗೊಂಡಿದ್ದರೂ ಅವನನ್ನೇ ಅಪರಾಧಕ್ಕೆ ಹೊಣೆಯಾಗಿಸಲಾಗುತ್ತದೆ.

ಅಪರಾಧಗಳಿಗೆ ಅವಕಾಶ ನೀಡುವ ಯಾವುದೇ ಕೋಮು ಸಮಸ್ಯೆಗಳ ಮೂಲದಲ್ಲಿ ಕುಸಿದು ಬಿದ್ದ ಕಾನೂನು ವ್ಯವಸ್ಥೆ ಇರುತ್ತದೆ. ಕಾನೂನು ವ್ಯವಸ್ಥೆಯನ್ನು ಕಾಪಾಡುವುದು ಪೂರ್ಣವಾಗಿ ರಾಜ್ಯ ಸರ್ಕಾರಗಳಿಗೆ ಸೇರಿದ ವಿಚಾರ. ರಾಜ್ಯಗಳಲ್ಲಿನ ಕಾನೂನು ವ್ಯವಸ್ಥೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯಾವುದೇ ನೇರ ಅಧಿಕಾರ ಇಲ್ಲ; ಆ ಸಮಸ್ಯೆಯ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳಲು ಅಥವಾ ಈ ಕುರಿತು ಯಾವುದೇ ಕಾನೂನನ್ನು ಮಾಡಲು ಕೇಂದ್ರವು ಅಧಿಕಾರವನ್ನು ಹೊಂದಿಲ್ಲ. ಕೇಂದ್ರವು ರಾಜ್ಯಗಳಿಗೆ ಸಲಹೆಗಳನ್ನು, ನಿರ್ದೇಶನಗಳನ್ನು ನೀಡುವ ಮಟ್ಟಿಗೆ ಅಥವಾ ಸಂದರ್ಭ ಒದಗಿದರೆ, ಸಂವಿಧಾನದ ಅನುಚ್ಛೇದ 356ರಡಿ ನಿಗದಿಪಡಿಸುವಂತೆ ರಾಜ್ಯಗಳು ಆಡಳಿತವನ್ನು ನಡೆಸುತ್ತಿವೆಯೇ ಇಲ್ಲವೇ ಎಂಬ ಬಗ್ಗೆ ಅಭಿಪ್ರಾಯವನ್ನು ರೂಪಿಸಿಕೊಳ್ಳುವ ಮಟ್ಟಿಗೆ ಕೇಂದ್ರ ಸರ್ಕಾರದ ಅಧಿಕಾರವ್ಯಾಪ್ತಿ ಮುಕ್ತಾಯ ವಾಗುತ್ತದೆ. ಆದರೆ, ಈಗ ಮಂಡಿಸಲಿರುವ ಮಸೂದೆಯು ಜಾರಿಯಾದಲ್ಲಿ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಕಲ್ಪಿಸುತ್ತದೆ. ರಾಜ್ಯ ಸರ್ಕಾರಗಳಿಗೆ ಇರುವ ಕಾನೂನು ರಚನೆಯ ಅಧಿಕಾರ ವ್ಯಾಪ್ತಿಯಲ್ಲೂ ಹಸ್ತಕ್ಷೇಪ ಮಾಡಿದಂತಾಗುತ್ತದೆ.

ಭಾರತವು ನಿಧಾನವಾಗಿ ವಿವಿಧ ಮತಧರ್ಮಗಳ ನಡುವೆ ಹೊಂದಾಣಿಕೆಯನ್ನು ಸಾಧ್ಯವಾಗಿಸಿಕೊಳ್ಳುವ ದಿಕ್ಕಿನಲ್ಲಿ ಮುಂದಡಿ ಇಡುತ್ತಾ ಬಂದಿದೆ. ಕೆಲವೊಂದು ಚಿಕ್ಕ ಪುಟ್ಟ ಕೋಮು ಅಥವಾ ಸಮಸ್ಯೆಗಳು ನಿರ್ಮಾಣವಾದಾಗ ಅವುಗಳ ವಿರುದ್ಧ ಸರಕಾರಗಳು, ಮಾಧ್ಯಮ, ನ್ಯಾಯಾಲಯಗಳು ಮತ್ತು ಇತರ ಸಂಸ್ಥೆಗಳು ತಮ್ಮ ಕರ್ತವ್ಯ ನಿರ್ವಹಣೆಗೆ ಧಾವಿಸುತ್ತವೆ. ಆದರೆ ಕೋಮು ಸಮಸ್ಯೆಗಳಿಗೆ ಕಾರಣರಾಗುವವರನ್ನು ಶಿಕ್ಷಿಸಬೇಕು ನಿಜ. ಆದರೆ, ಕೋಮು ಸಮಸ್ಯೆಗಳನ್ನು ಬಹುಸಂಖ್ಯಾತ ಸಮುದಾಯದವರೇ ಸೃಷ್ಟಿಸುತ್ತಾರೆಯೆ? ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವ್ಯಕ್ತಿಯಿಂದ ಕೋಮು ಸಮಸ್ಯೆ ಸೃಷ್ಟಿಯಾಗುವುದೇ ಇಲ್ಲವೆ? ಪ್ರಸ್ತಾಪಿತ ಮಸೂದೆ ಮಾತ್ರ ಅಂತಹ ಅಭಿಪ್ರಾಯ ಹೊಂದಿದೆ.

ಈ ಮಸೂದೆಯ ಪ್ರಕಾರ ಅಲ್ಪಸಂಖ್ಯಾತ ಸಮುದಾಯದವರು ಬಹುಸಂಖ್ಯಾತರ ವಿರುದ್ಧ ನಡೆಸುವ ಇಂಥದೇ ಕೃತ್ಯಗಳು ಅಪರಾಧಗಳು ಎಂದು ಪರಿಗಣಿಸುವುದೇ ಇಲ್ಲ. ಅಂದರೆ, ಲೈಂಗಿಕ ಹಲ್ಲೆಯು ಅಲ್ಪಸಂಖ್ಯಾತರ ಮೇಲೆ ನಡೆದರೆ ಮಾತ್ರ ಅಪರಾಧವಾಗಿ ಪರಿಗಣನೆಯಾಗಿ ಅದಕ್ಕೆ ಕಾರಣರಾದವರು ಶಿಕ್ಷಾರ್ಹರಾಗುತ್ತಾರೆ.

ಅದೇ ರೀತಿ 'ಯೋಜಿತ ಅಪಪ್ರಚಾರ' ಎಂಬುದು ಅಲ್ಪಸಂಖ್ಯಾತರ ವಿರುದ್ಧ ಇದ್ದರೆ ಮಾತ್ರ ಅಪರಾಧವಾಗುತ್ತದೆ; ಬಹುಸಂಖ್ಯಾತರ ವಿರುದ್ಧ ಇದ್ದರೆ ಅದು ಅಪರಾಧವಾಗುವುದಿಲ್ಲ. ಸಂಘಟಿತ ಹಿಂಸೆ, ಅಪರಾಧದಲ್ಲಿ ತೊಡಗುವವರಿಗೆ ಹಣಕಾಸಿನ ನೆರವು, ಚಿತ್ರಹಿಂಸೆ, ಸಾರ್ವಜನಿಕ ಸೇವಕರಿಂದ ಕರ್ತವ್ಯಲೋಪ ಎಲ್ಲವೂ ಅಪರಾಧಗಳಾಗುವುದು ಅಲ್ಪಸಂಖ್ಯಾತ ಸಮುದಾಯದವರ ವಿರುದ್ಧವಾಗಿ ನಡೆದಾಗ ಮಾತ್ರ; ಬಹುಸಂಖ್ಯಾತರ ವಿರುದ್ಧ ನಡೆದಾಗ ಇದ್ಯಾವುದು ಕೂಡಾ ಅಪರಾಧಗಳಾಗುವುದೇ ಇಲ್ಲ. ಬಹುಸಂಖ್ಯಾತ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂದಿಗೂ ಅಪರಾಧಕ್ಕೆ ಬಲಿಪಶು ಆಗುವುದೇ ಇಲ್ಲ ಎಂಬುದು ಈ ಮಸೂದೆಯ ಅಂಶ!

ಅಪರಾಧಗಳನ್ನು ಕೂಡ ತಾರತಮ್ಯವಾಗಿ ವ್ಯಾಖ್ಯಾನಿಸುವ ರೀತಿ ಈ ಮಸೂದೆಯಲ್ಲಿದೆ. ಬಹುಸಂಖ್ಯಾತರ ವಿರುದ್ಧ ನಡೆಸುವ ಅಪರಾಧಗಳಿಗಾಗಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಯಾವುದೇ ವ್ಯಕ್ತಿಯನ್ನು ಶಿಕ್ಷೆಗೆ ಗುರಿಪಡಿಸಲು ಈ ಮಸೂದೆಯಲ್ಲಿ ಅವಕಾಶ ಇಲ್ಲ. ಇಂಥ ಅಪರಾಧಗಳನ್ನು ಎಸಗುವವರು ಬಹುಸಂಖ್ಯಾತ ಸಮುದಾಯದವರೇ ಎಂಬ ಇಂಗಿತ ಇಲ್ಲಿದೆ. ಹಾಗಾಗಿ, ಬಹುಸಂಖ್ಯಾತ ಸಮುದಾಯದವರನ್ನು ಸಂದೇಹಿಸುವ ಮತ್ತು ಶಿಕ್ಷಿಸುವ ಉದ್ದೇಶ ಈ ಮಸೂದೆಗಿದೆ. ಈ ಮಸೂದೆಯಲ್ಲಿ ಇರುವಂತೆ ಕಾಯ್ದೆ ಆಗಿ, ಅದು ಜಾರಿಗೆ ಬಂದರೆ, ಶಿಕ್ಷೆಯ ಸಾಧ್ಯತೆಯೇ ಇಲ್ಲದ ಕಾರಣದಿಂದಾಗಿ, ಕೆಲವೊಂದು ಅಲ್ಪಸಂಖ್ಯಾತ ಸಮುದಾಯಗಳು ಅಪರಾಧಗಳಲ್ಲಿ ತೊಡಗುವುದಕ್ಕೆ ಪ್ರೋತ್ಸಾಹ

ನೀಡಿದಂತಾಗಲಿದೆ. ಭಯೋತ್ಪಾದಕರು ಹಿಂಸಾಚಾರದಲ್ಲಿ ತೊಡಗಿದರೆ ಶಿಕ್ಷೆಗೆ ಗುರಿಯಾಗುವುದಿಲ್ಲ ಎಂಬ ಸಂದೇಶವನ್ನು ನೀಡುತ್ತದೆ ಈ ಮಸೂದೆ. ಅಂಥ ಗುಂಪುಗಳು ಇನ್ನು ಕೋಮು ದಂಗೆಗಳನ್ನು ಸೃಷ್ಟಿಸುವ ಚಟುವಟಿಕೆಗಳಲ್ಲಿ ತೊಡಗ ಬಹುದು. ಬಹುಸಂಖ್ಯಾತ ಸಮುದಾಯಗಳವರೇ ಇಂಥ ಅಪರಾಧಗಳಿಗೆ ಜವಾಬ್ದಾರರು ಎಂಬುದು ಮಸೂದೆಯ ಇಂಗಿತ. ಧರ್ಮ ಅಥವಾ ಜಾತಿ ಆಧಾರದಲ್ಲಿ ಕಾನೂನು ಏಕೆ ತಾರತಮ್ಯ ನೀತಿಯನ್ನು ಅನುಸರಿಸಬೇಕು?

**ಕಾಯ್ದೆ ಜಾರಿ ಹೊಣೆ ಯಾರಿಗೆ?**

ಇಷ್ಟೆಲ್ಲಾ ಗೊಂದಲದ ಗೂಡಾಗಿರುವ ಈ ಕಾಯ್ದೆಯನ್ನು ಜಾರಿಗೊಳಿಸುವ ಹೊಣೆ ಯಾರದ್ದು? ಹೀಗೊಂದು ಪ್ರಶ್ನೆ ಹುಟ್ಟಿಕೊಂಡಿದೆ. ಆದರೆ ಸರಕಾರ ನೀಡಿದ ಉತ್ತರ ಹಾಗೂ ಅದು ನಡೆದುಕೊಳ್ಳಲು ನಿರ್ಧರಿಸಿರುವ ಕ್ರಮ ಬಹಳ ಅಘಾತಕಾರಿ ಯಾದದ್ದು. ಮಸೂದೆಯು ಏಳು ಜನ ಸದಸ್ಯರ 'ಕೋಮು ಸೌಹಾರ್ದ, ನ್ಯಾಯ ಮತ್ತು ಪರಿಹಾರ ಪ್ರಾಧಿಕಾರ'ವನ್ನು ರಚಿಸಲು ಅವಕಾಶ ಕಲ್ಪಿಸಿದೆ. ಇದರಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸೇರಿದಂತೆ ನಾಲ್ವರು ಒಂದು 'ಗುಂಪಿನ' ಅಂದರೆ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರು ಇರಬೇಕು. ಇದೇ ರೀತಿಯಲ್ಲಿ ಪ್ರತಿ ರಾಜ್ಯದಲ್ಲೂ ಪ್ರಾಧಿಕಾರಗಳು ರಚನೆಯಾಗಬೇಕು. ಈ ಪ್ರಾಧಿಕಾರಕ್ಕೆ ಜಾತಿ ಮತ್ತು ಧರ್ಮದ ಹಿನ್ನೆಲೆಯಲ್ಲೇ ನೇಮಕಾತಿ ಆಗುತ್ತದೆ. ಯಾವ ಪ್ರಾಧಿಕಾರದಲ್ಲಿ ದೇಶದ ಬಹುಸಂಖ್ಯಾತ ಸಮುದಾಯಗಳಿಗೆ ಸೇರಿದವರು ಅಲ್ಪಸಂಖ್ಯೆಯ ಪ್ರಾತಿನಿಧ್ಯವನ್ನು ಪಡೆದಿರುತ್ತಾರೋ, ಆ ಪ್ರಾಧಿಕಾರವು ಕಾಯ್ದೆಯನ್ನು ಜಾರಿಗೆ ತರುವ ಹೊಣೆಯನ್ನು ಹೊರುತ್ತದೆ. ಈ ಪ್ರಾಧಿಕಾರಕ್ಕೆ ಎಲ್ಲಾ ಸರಕಾರಗಳು ತಮ್ಮ ಪೊಲೀಸ್ ಮತ್ತು ಇತರ ತನಿಖಾ ಪಡೆಗಳ ಸೇವೆಯನ್ನು ಒದಗಿಸಬೇಕು. ತನಿಖೆ ನಡೆಸುವ, ಕಟ್ಟಡಗಳಲ್ಲಿ ಪ್ರವೇಶಿಸುವ, ದಾಳಿಗಳನ್ನು ನಡೆಸುವ, ವಿಚಾರಣೆ ನಡೆಸುವ, ದೂರುಗಳನ್ನು ಸ್ವೀಕರಿಸುವ, ತನಿಖೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ನಡಾವಳಿಗಳನ್ನು ದಾಖಲಿಸುವ ಮತ್ತು ಸರ್ಕಾರಗಳಿಗೆ ಶಿಫಾರಸುಗಳನ್ನು ಕಳಿಸುವ ಮತ್ತು ಹುಡುಕಾಟ ನಡೆಸುವ ಅಧಿಕಾರ ಈ ಪ್ರಾಧಿಕಾರಕ್ಕಿದೆ.

ಸಶಸ್ತ್ರ ಪಡೆಗಳಿಗೆ ನಿರ್ದೇಶನ ನೀಡುವ ಅಧಿಕಾರವೂ ಈ ಪ್ರಾಧಿಕಾರಕ್ಕೆ ಇದೆ. ಅಲ್ಲದೆ, ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರಗಳ ಕ್ರಮಗಳ ಪರಿಶೀಲನೆಗೆ ಸಲಹಾ ತಂಡಗಳನ್ನು ಕಳುಹಿಸುವ ಅಧಿಕಾರ ಕೂಡ ಈ ಪ್ರಾಧಿಕಾರಕ್ಕೆ ಇದೆ. ಪ್ರಧಾನಿ, ಗೃಹಮಂತ್ರಿ, ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯತೆ ಇರುವ ಪ್ರತಿ ರಾಜಕೀಯ ಪಕ್ಷದ ನಾಯಕರನ್ನು ಒಳಗೊಂಡ ಒಂದು ಮಂಡಳಿ ರಾಷ್ಟ್ರೀಯ ಮಟ್ಟದ ಪ್ರಾಧಿಕಾರವನ್ನು ರಚಿಸುತ್ತದೆ. ರಾಜ್ಯ ಮಟ್ಟದ ಪ್ರಾಧಿಕಾರಗಳನ್ನು ರಚಿಸಲೂ ಇದೇ ಮಾದರಿ. ಹೀಗೆ, ಈ ಪ್ರಾಧಿಕಾರಗಳಲ್ಲಿ ಬಹುಮತ ದೊರಕುವುದು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ವಿರೋಧ ಪಕ್ಷಗಳಿಗೆ. ಅನುಸರಿಸಬೇಕಾದ ಕ್ರಮ

ಬದ್ಧತೆ ಈ ಕಾಯ್ದೆ ಪ್ರಕಾರ ತನಿಖೆಗೆ ಅನುಸರಿಸಬೇಕಾದ ಕ್ರಮಬದ್ಧತೆ ಅಸಾಮಾನ್ಯ ವಾಗಿದೆ. ಸಿ.ಆರ್.ಪಿ.ಸಿ. ಸೆಕ್ಷನ್ 161ರ ಪ್ರಕಾರ ಹೇಳಿಕೆಗಳನ್ನು ದಾಖಲಿಸುವ ಆವಶ್ಯಕತೆ ಇಲ್ಲ. ದಾಳಿಗೆ ಗುರಿಯಾದವರ ಹೇಳಿಕೆಗಳನ್ನು ಕೇವಲ ಸೆಕ್ಷನ್ 164ರ ಪ್ರಕಾರ ನ್ಯಾಯಾಲಯಗಳಲ್ಲಿ ಮಾತ್ರ ದಾಖಲಿಸಲಾಗುವುದು. ಈ ಕಾಯ್ದೆಯು ದೂರವಾಣಿ ಸಂದೇಶಗಳನ್ನು ಆಲಿಸುವ ಮತ್ತು ತಡೆಹಿಡಿಯುವ ಅಧಿಕಾರವನ್ನು ಸರಕಾರಗಳಿಗೆ ನೀಡುತ್ತದೆ. ಮಸೂದೆಯ ಪ್ರಕಾರ, ಒಬ್ಬ ವ್ಯಕ್ತಿಯು ಆರೋಪಕ್ಕೆ ಗುರಿಯಾದರೆ, ತಾವು ಅಂಥ ಕೃತ್ಯದಲ್ಲಿ ತೊಡಗಿಲ್ಲ ಎಂಬುದನ್ನು ಸಾಬೀತುಪಡಿಸುವ ಜವಾಬ್ದಾರಿ ಆ ವ್ಯಕ್ತಿಯದೇ ಆಗುತ್ತದೆ. ಸಾರ್ವಜನಿಕ ಸೇವಕರನ್ನು ತನಿಖೆಗೆ ಗುರಿಪಡಿಸುವುದಕ್ಕೆ ಸರಕಾರದಿಂದ ಯಾವುದೇ ಅನುಮತಿ ಬೇಕಿಲ್ಲ ಎಂದು ಮಸೂದೆ ಹೇಳುತ್ತದೆ.

**ಯಾವ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸುತ್ತಾರೆ?**

ಗುಜರಾತ್ ಗಲಭೆಯ ಬಳಿಕ ಬಹುಸಂಖ್ಯಾತರ ವಿರುದ್ಧ ಕೆಂಡಕಾರಿದ ಶಕ್ತಿಗಳೇ ಈ ಮಸೂದೆ ರಚನೆಯ ಹಿಂದಿವೆ. ಕೋಮು ಹಿಂಸಾಚಾರ ಎಂದರೆ ದೇಶದ 'ಜಾತ್ಯತೀತ ಸ್ವರೂಪ'ವನ್ನು ನಾಶಗೊಳಿಸುವಂಥ ಹಿಂಸಾಚಾರ ಎಂದು ಇಲ್ಲಿ ವ್ಯಾಖ್ಯಾನಿಸಲಾಗಿದೆ. ಆದರೆ, ಜಾತ್ಯತೀತತೆಯ ಅರ್ಥ ಏನು ಎಂಬ ಬಗ್ಗೆ ಕಾನೂನುಬದ್ಧ ರಾಜಕೀಯ ಏಕಾಭಿಪ್ರಾಯ ಇರಲು ಸಾಧ್ಯವಿಲ್ಲ. ಬೇರೆ ಬೇರೆ ವ್ಯಕ್ತಿಗಳು ಜಾತ್ಯತೀತತೆ ಎಂಬುದನ್ನು ಬೇರೆ ಬೇರೆ ರೀತಿಯಲ್ಲಿ ಅರ್ಥೈಸಬಲ್ಲರು. ಹಾಗಿದ್ದರೆ ಜಾತ್ಯತೀತತೆಗೆ ನೀಡಲಾಗುವ ಯಾವ ಅರ್ಥವನ್ನು ನ್ಯಾಯಾಧೀಶರು ಅನುಸರಿಸಬೇಕು? ಹಾಗೆಯೇ, ಮಸೂದೆಯಲ್ಲಿ 'ವಿದ್ವೇಷಿ ಪರಿಸರ' (ಹಾಸ್ಟೈಲ್ ಎನ್‌ವಿರಾನ್‌ಮೆಂಟ್) ಎಂಬ ಪದಕ್ಕೂ ಹತ್ತು ಹಲವು ಅರ್ಥಗಳನ್ನು ನೀಡ ಬಹುದು. ಇಂಥ ಕಾಯ್ದೆಗಳ ಪರಿಣಾಮವಾಗಿ ಯಾವುದೇ ಕೋಮು ಸಮಸ್ಯೆಗೆ ಬಹುಸಂಖ್ಯಾತ ಸಮುದಾಯದವರನ್ನೇ ಆರೋಪಿಗಳೆಂದು ದಾಖಲಿಸುವುದು ಅನಿವಾರ್ಯವಾಗುತ್ತದೆ.

ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಸ್ಥಾಪಿಸಲು ನಿಗದಿಪಡಿಸಿರುವ ವಿಧಿಬದ್ಧ ಪ್ರಾಧಿಕಾರಗಳು, ಜಾತಿ ಮತ್ತು ಕೋಮು ಆಧಾರದ ಸ್ವರೂಪ ಪಡೆದಿರುವ ಕಾರಣ, ಸಾಂಸ್ಥಿಕ ಪಕ್ಷಪಾತದಿಂದ ನರಳುತ್ತಿವೆ. ಯಾವ ಉದ್ದೇಶದಿಂದ ಈ ಮಸೂದೆಯನ್ನು ಸಿದ್ಧಪಡಿಸಲಾಗಿದೆಯೋ ಆ ಉದ್ದೇಶದ ಈಡೇರಿಕೆಗೆ ಇದು ವಿರೋಧವಾಗಿದೆ. ಈ ಕಾಯ್ದೆ ಜಾರಿಗೆ ಬಂದಲ್ಲಿ ಅದು ಭಾರತದಲ್ಲಿ ಭಿನ್ನ ಸಮುದಾಯಗಳಲ್ಲಿರುವ ಸೌಹಾರ್ದಭಾವನೆಗೆ ಧಕ್ಕೆ ತರುತ್ತದೆ ಎಂಬಲ್ಲಿ ಸಂದೇಹವೇ ನನಗಿಲ್ಲ. ಇದು ಅಪಾಯಕರ ಪರಿಣಾಮಗಳಿಗೆ ಎಡೆ ಕೊಡುವ ಕಾಯ್ದೆ. ಇದು ದುರುಪಯೋಗ ವಾಗುವುದು ಖಚಿತ. ಬಹುಶಃ ಇಂಥ ಮಸೂದೆಯನ್ನು ಸಿದ್ಧಪಡಿಸಿರುವ ಉದ್ದೇಶವೂ ಇದೇ ಇರಬೇಕು.

ಭಯೋತ್ಪಾದನೆ ವಿರೋಧಿಯಾದ 'ಟಾಡಾ ಕಾಯ್ದೆ 'ವಿರುದ್ಧ ಕೆಲವೊಂದು ವ್ಯಕ್ತಿಗಳು ಆಂದೋಲನ ನಡೆಸಿದ್ದರು. ಅದನ್ನು ಬೆಂಬಲಿಸಿದ ಯುಪಿಎ ಕೂಡ ಭಯೋತ್ಪಾದಕರನ್ನು ಸಾಮಾನ್ಯ ಕಾಯ್ದೆಗಳ ಅಡಿಯಲ್ಲೇ ತನಿಖೆಗೆ ಮತ್ತು ಶಿಕ್ಷೆಗೆ ಗುರಿಪಡಿಸಬಹುದು ಎಂದಿತ್ತು. ಆದರೆ ಈಗ ಅದೇ ಯುಪಿಎ ಕೋಮು ಸಂಘರ್ಷ ದಮನಕ್ಕೆ ಎಂಬ ಕಾರಣ ನೀಡಿ ಇನ್ನೂ ಹೆಚ್ಚಿನ ಕರಾಳ ಕಾಯ್ದೆಯನ್ನು ತರಲು ಹೊರಟಿದೆ.

ಕೇಂದ್ರ ಸರಕಾರವು ಇಂಥ ದುಸ್ಸಾಹಸಕ್ಕೆ ಮುಂದಾಗಿರುವಾಗ ರಾಜ್ಯ ಸರಕಾರಗಳು ನಿರಾಶೆಯಿಂದ ನೋಡುತ್ತಾ ಕುಳಿತಿವೆ. ಕೋಮು ಸೌಹಾರ್ದ ಸಾಧಿಸಲು ನಾವು ಮುಂದಡಿ ಇಡಬೇಕಿರುವುದು ನ್ಯಾಯವಾದ ದಾರಿಯಲ್ಲೇ ಹೊರತು ತಾರತಮ್ಯ ತುಂಬಿದ ದಾರಿಯಲ್ಲಲ್ಲ.

---

ಲೇಖಕರು : ರಾಜ್ಯಸಭೆಯಲ್ಲಿ ವಿರೋಧಪಕ್ಷದ ನಾಯಕರು

# ದೇಶಕ್ಕೆ ಚಪ್ಪಡಿ ಕಲ್ಲಾದೀತು

■ ಅರಿಂದಮ್ ಚೌಧುರಿ

ನರಕದ ದಾರಿ ಬಹುತೇಕ ಎಲ್ಲ ಸಲ ಗೌರವಪೂರ್ಣವಾದ ಆಶಯಗಳನ್ನು ಹೊಂದಿರುವಂತೆ ಕಾಣಿಸುತ್ತದೆ. ಭಾರತದ ಪ್ರಜಾಪ್ರಭುತ್ವದಲ್ಲಿ ಇದು ಅಸಂಖ್ಯ ಸಂದರ್ಭಗಳಲ್ಲಿ ನಿಜವೆಂದು ಸಾಬೀತಾಗಿದೆ. ಈಗ ಚರ್ಚಿಸಲಾಗುತ್ತಿರುವ ಹೊಸ ನೀತಿ ಏನಾದರೂ ಕಾನೂನು ಆದಲ್ಲಿ ಇನ್ನೊಮ್ಮೆ ನಾವು ನರಕದ ದಿನಗಳಿಗೆ ಬೀಳಬಹುದೆಂದು ನನಗೆ ಭಯವಾಗುತ್ತಿದೆ. ಭಾರತದ ಸೂಪರ್ ಸೆಕ್ಯೂಲರ್ ನಿವಾಸಿಗಳಿಂದಾಗಿ ಅದು ಕಾನೂನಾದರೂ ಆಗಬಹುದೆನಿಸುತ್ತದೆ. ಆ ಜನರ ಗೌರವಪೂರ್ಣ ಆಶಯಗಳ ತೀವ್ರತೆ ಮತ್ತು ವ್ಯಾಪ್ತಿ ಎಷ್ಟೊಂದು ಇದೆಯೆಂದರೆ ಆ ಗೌರವಪೂರ್ಣ ಆಶಯಗಳಿಂದ ಚಾಲನೆ ಪಡೆಯಬಹುದಾದ ಗದ್ದಲಕ್ಕೆ ಅದು ಸಮಾನವಾಗಿದೆ ಎನ್ನಬಹುದು.

ಯುಪಿಎ ಸರಕಾರದ ಎಲ್ಲ ಬಗೆಯ ನೀತಿಗಳಿಗೆ ಸಂಬಂಧಿಸಿ ಸಲಹೆ ನೀಡುವುದು ತಮ್ಮ 'ದಿವ್ಯವಾದ ಹಕ್ಕು' ಎಂದು ತಿಳಿದಿರುವ ಸದಾಶಯದ ಮೂರ್ತಿಗಳಾದ ಅರ್ಥಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಚಳವಳಿಗಾರರು ಹಾಗೂ ವಿಭಿನ್ನವಾದ ಝೋಲಾವಾಲಾ ಶೈಲಿಯ ಜನರ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ಪಿರಮಿಡ್‌ನ ತುತ್ತತುದಿಯಲ್ಲಿರುವ ಒಳ್ಳೆಯದನ್ನೆಷ್ಟೇ ಮಾಡುವ ಜನರೆಂದರೆ ರಾಷ್ಟ್ರೀಯ ಸಲಹಾ ಮಂಡಳಿ (National Advisory Council) ಯವರು, ಸೋನಿಯಾ ಗಾಂಧಿ ಅದರ ಮುಖ್ಯಸ್ಥರು. ದೇಶದ ಆಮ್ ಆದ್ಮಿಯನ್ನು ಕುರಿತಾದ ಬದ್ಧತೆಯ ವಿಷಯಕ್ಕೆ ಬಂತೆಂದರೆ ಎನ್‌ಎಸಿಯ ಎಲ್ಲ ಸದಸ್ಯರು ನಿರ್ದಿಷ್ಟವಾದ ದಾಖಲೆ ಹೊಂದಿರುವವರು. ಇನ್ನೊಂದು ವಿಷಯವನ್ನು ಕೂಡ ನಾನು ಸ್ಪಷ್ಟವಾಗಿ ಹೇಳಬೇಕು. ಅದೆಂದರೆ ಮಾಹಿತಿ ಹಕ್ಕು ಕಾಯ್ದೆ, ಎನ್‌ಆರ್‌ಇಜಿಎ ಹಾಗೂ ಶಿಕ್ಷಣದ ಹಕ್ಕು ಕಾಯ್ದೆಯಂತಹ ಹೊಸ ಮಾರ್ಗವನ್ನು ಹಾಕಿಕೊಟ್ಟ ಕಾಯ್ದೆಗಳನ್ನು ತಂದ ಯಶಸ್ಸಿನ ದೊಡ್ಡ ಪಾಲು ಎನ್‌ಎಸಿಗೆ ಸಲ್ಲುತ್ತದೆಂದು ನಾನು ಸ್ಪಷ್ಟವಾಗಿಯೇ ಹೇಳ ಬಯಸುತ್ತೇನೆ. ಆಹಾರದ ಹಕ್ಕಿನ ಕಾಯ್ದೆಯನ್ನು ಅನುಷ್ಠಾನಗೊಳಿಸುವಲ್ಲಿ ಸರಕಾರ ಬೇಜಾವಾಬ್ದಾರಿ, ಸ್ಪಂದನರಹಿತ ಹಾಗೂ ಕ್ರೂರವಾಗಿ ನಡೆದುಕೊಂಡಾಗ ಅದರ ವಿರುದ್ಧ ದಿಟ್ಟತನದಿಂದ ಹೋರಾಡಿದವರು ಇದೇ ಎನ್‌ಎಸಿ ಸದಸ್ಯರೆನ್ನುವುದು ಅಚ್ಚರಿಮೂಡಿಸುವ ಸಂಗತಿಯಾಗಿದೆ.

ಮೇಲೆ ಹೇಳಿದ ಎಲ್ಲ ಸಂದರ್ಭಗಳಲ್ಲಿ ಸದಾಶಯಗಳನ್ನು ಹೊಂದಿದಂತಹ ಜನ ಯಾವಾಗಲೂ ಅನ್ಯಾಯಕ್ಕೊಳಗಾದವರ ಹಕ್ಕುಗಳನ್ನು ರಕ್ಷಿಸಲು ಶ್ರಮಿಸಿದ್ದನ್ನು

ಕಾಣುತ್ತೇವೆ. ಸಾಮಾನ್ಯವಾಗಿ ಸರಕಾರದಿಂದ ಕೇವಲ ಬಾಯೋಪಚಾರವನ್ನು ಪಡೆಯುವ ಬಡವರು ಮತ್ತು ಕೆಳವರ್ಗಗಳವರೇ ಇಲ್ಲಿನ ಸಂತ್ರಸ್ತರು. ಈ ಗುಂಪು ಈಗ ಇನ್ನೊಂದು ಬಗೆಯ ಸಂತ್ರಸ್ತರ ಹಕ್ಕುಗಳನ್ನು ರಕ್ಷಿಸಲು ಧಾವಿಸುತ್ತಿದೆ. ಅಂದರೆ ನಾನು ಕೋಮುಗಲಭೆ ಮತ್ತು ಹಿಂಸಾಚಾರದ ಸಂತ್ರಸ್ತರ ಕುರಿತು ಹೇಳುತ್ತಿದ್ದೇನೆ. ಕೋಮುಗಲಭೆಗಳು ಭಾರತದ ಪ್ರಜಾಪ್ರಭುತ್ವಕ್ಕೊಂದು ಕಪ್ಪು ಚುಕ್ಕೆ ಎಂಬುವುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಅದೇ ರೀತಿ ಸಾಮಾನ್ಯವಾಗಿ ಕೋಮು ಹಿಂಸಾಚಾರದ ಫಲ ಅನುಭವಿಸುವವರು ಅಲ್ಪಸಂಖ್ಯಾತರು ಎಂಬುದನ್ನು ಕೂಡ ಯಾರೂ ಅಲ್ಲಗಳೆಯಲಾರರು, ಅದೇ ವೇಳೆ ಗಲಭೆಗೆ ಪ್ರಚೋದನೆ ಬಹಳಷ್ಟು ಸಲ ಎರಡೂ ಕಡೆಯವರಿಂದ ಬಂದಿರುತ್ತದೆ ಎಂಬುದು ಕೂಡ ಸತ್ಯ.

ಕೋಮು ಹಿಂಸಾಚಾರಗಳು ಅಲ್ಪಸಂಖ್ಯಾತರನ್ನು ಯಾವ ರೀತಿ ಅಸಹಾಯಕ ಸ್ಥಿತಿಗೆ ತಳ್ಳುತ್ತವೆ ಎಂಬುದಕ್ಕೆ 2002ರ ಗುಜರಾತ್ ಗಲಭೆ (ಗೋಧ್ರೋತ್ತರ) ಮತ್ತು 2008ರ ಒರಿಸ್ಸಾ ಗಲಭೆಗಳನ್ನು ಶ್ರೇಷ್ಠ ಉದಾರಹಣೆಗಳೆಂದು ನೀಡಲಾಗುತ್ತದೆ. ಗುಜರಾತ್‌ನಲ್ಲಿ ಮುಸ್ಲಿಮರು ನೋವುಂಡರೆ ಒರಿಸ್ಸಾದಲ್ಲಿ ಕ್ರೈಸ್ತರು ಆದ್ದರಿಂದ ಸಂತ್ರಸ್ತರ ರಕ್ಷಣೆಯ ತಮ್ಮ ಘನ ಉದ್ದೇಶಕ್ಕೆ ಅನುಗುಣವಾಗಿ ಎನ್‌ಎಸಿ ಸದಸ್ಯರು ಕೋಮುವಾದಿ ಹಿಂಸಾಚಾರ ಮಸೂದೆ (Communal Viloence Bill)ಗೆ ತಮ್ಮ ಹೆಸರು ನಿಶಾನೆ ತೋರಿಸಿ ಬಿಟ್ಟಿದ್ದಾರೆ. ಕೋಮುವಾದಿ ಮತ್ತು ಉದ್ದೇಶಪೂರ್ವಕ ಹಿಂಸಾಚಾರ ತಡೆ ಮಸೂದೆ (Prevention of Communal and Targeted Violence Bill) ಎನ್ನುವುದು ಅದರ ಅಧಿಕೃತ ಹೆಸರು, ಕೋಮುಗಲಭೆಯ ವೇಳೆ ಸಂಭವಿಸುವ ಕೊಲೆ, ಹಿಂಸೆ ಮುಂತಾದವುಗಳಿಂದ ಅಲ್ಪಸಂಖ್ಯಾತರನ್ನು ರಕ್ಷಿಸುವುದು ಅದರ ಉದ್ದೇಶವಾಗಿದೆ.

*ಪ್ರಸ್ತಾವಿತ ಕಾನೂನು ಮತ್ತು ಅರುಣ್ ಜೇಟ್ಲಿಯಂತಹ ರಾಜಕಾರಣಿಗಳು ಅದರ ವಿರುದ್ಧ ಎತ್ತಿದ ಆಕ್ಷೇಪಗಳನ್ನು ಪತ್ರಿಕೆಗಳಲ್ಲಿ ಓದಿದಾಗ ಬಹುಶಃ ಬಿಜೆಪಿ ಹಿಂದುತ್ವದ ಆಟ ಆಡುತ್ತಿದೆ ಎನ್ನುವುದು ನನ್ನ ಮೊದಲ ಪ್ರತಿಕ್ರಿಯೆಯಾಗಿತ್ತು. ಮಸೂದೆಯ ಕೆಲವು ಪ್ರಸ್ತಾವಗಳು ಮತ್ತು ಷರತ್ತುಗಳನ್ನು ಓದಿದಾಗ ಆಘಾತದಿಂದ ಮೌನವಾಗುವುದು ನನ್ನ ಸರದಿಯಾಯಿತು.*

ಈ ವಿಷಯದಲ್ಲಿ ಹೆಚ್ಚಿನ ದೈನಿಕಗಳು, ನಿಯತಕಾಲಿಕೆಗಳು ಹಾಗೂ ಟಿವಿ ಚಾನೆಲ್‌ಗಳು ರಾಜಕೀಯವಾಗಿ ಸರಿಯಾಗಿ ನಡೆದುಕೊಂಡಿವೆ ಎನ್ನಬಹುದು, ಮಸೂದೆಯ ಕರಡು ಪ್ರತಿಯ ಬಗ್ಗೆ ಕಣ್ಣುಮುಚ್ಚಿಕೊಂಡು ಹೇಳಿದ್ದನ್ನೇ ಹೇಳಿದವು, ಬಹಳಷ್ಟು ಗೊಣಗಿದವು. ಆದರೆ ರಾಜಕೀಯವಾಗಿ ಸರಿ ಎಂಬಂತಹ ನಿಲುವಿನಲ್ಲಿ ನನಗೆ ನಂಬಿಕೆಯಿಲ್ಲ. ಆದ್ದರಿಂದ ಪ್ರಸ್ತಾವಿತ ಕಾನೂನಿನಿಂದ ಏನೇನು ತೊಂದರೆ ಗಳಾಗಬಹುದು ಎಂಬುದನ್ನಿಲ್ಲ ನೇರ ಮಾತುಗಳಲ್ಲಿ ಹೇಳಬಯಸುತ್ತೇನೆ.

ಈ ಮಸೂದೆ ಏನಾದರೂ ಶಾಸಕನಾದರೆ ಕೋಮುಗಲಭೆಗೆ ಹಿಂದುಗಳು ಮಾತ್ರ ಕಾರಣ ಎನ್ನುವುದು ಸಾಂವಿಧಾನಿಕವಾಗಿ ಸ್ವೀಕೃತವಾದಂತೆ ಅದಕ್ಕೆ

ಮುಸ್ಲಿಮರು, ಕ್ರೈಸ್ತರು ಮತ್ತಿತರ ಅಲ್ಪಸಂಖ್ಯಾತರು ಕಾರಣವೆಂದು ಹೇಳುವಂತೆಯೇ ಇಲ್ಲ. ಗುಂಪು (Group) ಎಂಬ ಪದದ ವ್ಯಾಖ್ಯೆಯೇ ಅದಕ್ಕೆ ಕಾರಣ; ಈ ಪದ ಪ್ರಸ್ತುತ ಮಸೂದೆಯ ಬೆನ್ನೆಲುಬಾಗಿದ್ದು, ಬಹುಸಂಖ್ಯಾತರು, ಅಂದರೆ ಹಿಂದುಗಳೇ ಪೂರ್ತಿ ಹೊಣೆಗಾರರಾಗುವಂತೆ ಮಸೂದೆಯನ್ನು ಸಿದ್ಧಪಡಿಸಲಾಗಿದೆ.

## ಹಿಂದೂ ದಮನಕ್ಕೆ ಸಿದ್ಧತೆ

ಈ ರೀತಿಯಲ್ಲಿ ಮಸೂದೆ ಶಾಸನವಾದರೆ ಹಿಂದುಗಳು ಮಾತ್ರ ಮತೀಯ ದ್ವೇಷಕ್ಕೆ ಪ್ರಚೋದನೆ ನೀಡಿ ಕಿಡಿ ಹಚ್ಚುತ್ತಾರೆ ಮತ್ತು ಇತರ ಮತಗಳನ್ನು ಕೀಳಾಗಿ ಕಾಣುತ್ತಾರೆ; ಮುಸ್ಲಿಮರು ಮತ್ತು ಕ್ರೈಸ್ತರು ಯಾವುದೇ ಕಾಲಕ್ಕೆ ಹಾಗೆ ಮಾಡುವುದಿಲ್ಲ ಎಂಬುವುದನ್ನು ನಮ್ಮ ಸಂವಿಧಾನ ಒಪ್ಪಿಕೊಂಡಂತಾಗುತ್ತದೆ. ಅದಾದಲ್ಲಿ ಗುಜರಾತ್ ಗಲಭೆಯ ಎಲ್ಲ ಅರೋಪಿಗಳು ಒಮ್ಮೆಲೇ ಶಿಕ್ಷಾರ್ಹರಾಗಿ ಶಿಕ್ಷೆಗೆ ಗುರಿಯಾಗುತ್ತಾರೆ. ಅದೇ ವೇಳೆ ಗೋಧ್ರಾದಲ್ಲಿ ರೈಲಿನ ಬೋಗಿಗೆ ಬೆಂಕಿ ಹಚ್ಚಿ ಸಜೀವ ದಹನ ನಡೆಸಿದವರ ಮೇಲೆ ಯಾವುದೇ ಆರೋಪ ಬರುವುದಿಲ್ಲ; ಅದು ಕೂಡ ಸದಾಶಯ ದಿಂದ ಮಾಡಿದ್ದು ಎನಿಸಬಹುದು. ಮುಸ್ಲಿಮರು ಮತ್ತು ಕ್ರೈಸ್ತರು ಕೂಡ ಹಿಂಸೆ ಮತ್ತು ದ್ವೇಷಗಳನ್ನು ತೋರಿಸಬಲ್ಲರೆಂಬುದನ್ನು ಸಂವಿಧಾನ ಒಪ್ಪಿಕೊಳ್ಳುವುದೇ ಇಲ್ಲ. ಆದ್ದರಿಂದ ಕೋಮು ಹಿಂಸೆ ಏನೇ ನಡೆದರೂ ಹಿಂದುಗಳನ್ನೇ ವಿಚಾರಣೆಗೊಳ ಪಡಿಸಿ ಶಿಕ್ಷೆ ವಿಧಿಸಬೇಕಾಗುತ್ತದೆ. ಈ ಮಸೂದೆ ಶಾಸನವಾದಲ್ಲಿ ಒಬ್ಬ ಹಿಂದೂವಿನ ವಿರುದ್ಧ ಕೋಮು ಹಿಂಸೆ–ದ್ವೇಷಕ್ಕೆ ಸಂಬಂಧಿಸಿ ಪ್ರಕರಣ ದಾಖಲಿಸಲು ಒಂದು ಅನಾಮಧೇಯ ದೂರು ಸಾಕು; ಪೊಲೀಸರು ಜಾಮೀನುರಹಿತ ಅಪರಾಧದ ಪ್ರಕರಣ ದಾಖಲಿಸುತ್ತಾರೆ. ಬಂಧನಕ್ಕೊಳಗಾಗುವ ಆರೋಪಿಗೆ ದೂರು ನೀಡಿದವರು ಯಾರು ಎಂಬುದನ್ನು ತಿಳಿಯುವ ಹಕ್ಕು ಕೂಡ ಇಲ್ಲ. ಪ್ರಕರಣ ದಾಖಲಾಯಿ ತೆಂದರೆ ಆರೋಪಿಯೇ ಅಪರಾಧಿಯೂ ಆಗಿ ಬಿಡುತ್ತಾನೆ; ತಾನು ಅಪರಾಧವೆಸ ಗಿಲ್ಲ; ಮುಗ್ಧ ಎಂಬುದು ಸಾಬೀತುಪಡಿಸಿ ಹೊರಗೆ ಬರುವುದು ಅವನ ಜವಾಬ್ದಾರಿ ಆಗಿರುತ್ತದೆ. ಕಂದಾಚಾರಿಗಳಾದ ಕ್ರೈಸ್ತ ಪಾದ್ರಿಗಳು (ಅಂಥವರು ತುಂಬ ಇದ್ದಾರೆ) ಹಣ ನೀಡಿ ಮತ್ತು ಆಮಿಷವೊಡ್ಡಿ ಬುಡಕಟ್ಟು ಜನರನ್ನು ಮತಾಂತರಗೊಳಿಸು ತ್ತಿದ್ದಾರೆಂದು ಓರ್ವ ಹಿಂದೂ ಕಾರ್ಯಕರ್ತ ಪೊಲೀಸರಿಗೆ ದೂರು ನೀಡಿದರೆ ಸಾಕು; ಅವನನ್ನೇ ಬಂಧಿಸಬಹುದು. ಇನ್ನೊಂದೆಡೆ ಕ್ರೈಸ್ತ ಪಾದ್ರಿಗಳು ಹಿಂದೂಗಳನ್ನು ಅನಾಗರಿಕ (heathen) ಅಥವಾ ಕಾಫಿರ್ ಎಂದು ನಿಂದಿಸಿದರು. ಹಿಂದೂ ದೇವ–ದೇವಿಯರ ವಿಗ್ರಹಗಳನ್ನು ಧ್ವಂಸ ಮಾಡಿದರೂ ಕೂಡ ಸಂವಿಧಾನದ ಪ್ರಕಾರ ಅವರು ಆರೋಪಿಗಳೆನಿಸುವುದಿಲ್ಲ; ಅವರು ಎಂದೆಂದಿಗೂ ನಿರಪರಾಧಿಗಳು.

ಇದಿಷ್ಟು ಹಿಂದುಗಳ ಬಗ್ಗೆ ಇದಿಷ್ಟೇ ಅಲ್ಲ, ಮಸೂದೆಯ ಪ್ರತಿಯೊಂದು ವಾಕ್ಯಾಂಶ (Clause) ಕೂಡ ದೋಷಪೂರ್ಣವಾಗಿದೆ. ದ್ವೇಷದ ಪ್ರಚಾರ (Hate Propaganda) ಎಂಬುದಕ್ಕೆ ಯಾವರೀತಿಯಲ್ಲಿ ವ್ಯಾಖ್ಯೆಯನ್ನು ರೂಪಿಸಲಾಗಿದೆ ಎಂದರೆ ಸರಕಾರಕ್ಕೆ ವಾಕ್‌ಸ್ವಾತಂತ್ರ್ಯವನ್ನೇ ದಮನ ಮಾಡುವಂತಹ ಕ್ರೂರ

ಅಧಿಕಾರವನ್ನು ನೀಡಲಾಗಿದೆ. ಸರ್ವಾಧಿಕಾರಿ ಧೋರಣೆಯ ಮೇರೆಗೆ ಈ ಮಸೂದೆಯನ್ನು ರೂಪಿಸಲಾಗಿದ್ದು, ನಿರಪರಾಧಿ ಎಂದು ಘೋಷಿತವಾಗುವ ತನಕ ಇದು ಆರೋಪಿಯನ್ನು ಅಪರಾಧಿ ಎಂದು ಪರಿಗಣಿಸುತ್ತದೆ. ಆ ಕಾರಣದಿಂದ ಇದು ಪೂರ್ತಿ ಅಸಾಂವಿಧಾನಿಕವಾಗಿದೆ. ಮುಂದೆ ಇದು ರಾಷ್ಟ್ರೀಯ ಪ್ರಾಧಿಕಾರ (National Authority)ವೊಂದನ್ನು ರಚಿಸಬೇಕೆಂದು ಕೂಡ ಹೇಳುತ್ತದೆ; ಅದರಿಂದ ಕಿರುಕುಳಕ್ಕೆ ಹೊಸ ಒಂದು ಕೇಂದ್ರ ಆದುದಷ್ಟೇ ಲಾಭ ಎನ್ನಬಹುದು.

ಗೌರವಪೂರ್ಣ ಆಶಯಗಳು ನಮ್ಮಲ್ಲಿ ಎಲ್ಲಿಗೆ ಒಯ್ಯಬಹುದು ಎಂಬುದು ನಿಮಗೀಗ ಅರ್ಥವಾಗಿರಲಿಕ್ಕೆ ಸಾಕು. ಚಳವಳಿಗಾರರು, ಸದಾಶಯ ಉಳ್ಳವರು ಮತ್ತು ಎನ್‌ಎಸಿ ಸದಸ್ಯರ ತನಕ ಅದೇ ರೀತಿಯ ಇತರ ಜನ, ಕೋಮುಗಲಭೆ ಮತ್ತು ಹಿಂಸಾಚಾರಗಳಿಂದ ಅಲ್ಪಸಂಖ್ಯಾತರನ್ನು ರಕ್ಷಿಸಬೇಕೆಂದು ಪ್ರಾಮಾಣಿಕವಾಗಿ ಬಯಸುತ್ತಾರೆಂಬುದನ್ನು ನಾನು ಎಳ್ಳಷ್ಟೂ ಸಂದೇಹಿಸುವುದಿಲ್ಲ. ಅವರಲ್ಲಿ ಹೆಚ್ಚಿನವರಿಗೆ–ಉದ್ದೇಶಪೂರ್ವಕವಾಗಿಯೇ ನಾನು ಎಲ್ಲರೂ ಎನ್ನುತ್ತಿಲ್ಲ–ಹಿಂದೂ ಧರ್ಮದ ಎಲ್ಲ ವಿಷಯಗಳ ಬಗೆಗೆ ಯಾವುದೋ ವಿಚಿತ್ರವಾದ ಅವ್ಯಕ್ತ ದ್ವೇಷವಿದೆ ಎಂಬುದರಲ್ಲಿ ಕೂಡ ನನಗೆ ಸಂಶಯವಿಲ್ಲ.

**ಸಾಮರಸ್ಯ ಸಾಧ್ಯವೇ?**

ಆದರೆ ನೀವು ಪ್ರಾಮಾಣಿಕವಾಗಿ ನಿಮ್ಮನ್ನೇ ಪ್ರಶ್ನಿಸಿಕೊಳ್ಳಿ, ಈ ಮಸೂದೆಯಿಂದ ದೇಶದಲ್ಲಿ ಕೋಮು ಸಾಮರಸ್ಯವನ್ನು ತರಲು ಸಾಧ್ಯವೇ?

ವಿಷಯ ಇಷ್ಟೊಂದು ಗಂಭೀರ ಮತ್ತು ದೇಶದ ಭವಿಷ್ಯಕ್ಕೆ ಆಪತ್ಕಾರಿ ಅಲ್ಲವಾಗಿದ್ದರೆ ನಾನು ಸುಮ್ಮನೆ ಗಟ್ಟಿಯಾಗಿ ನಕ್ಕುಬಿಡುತ್ತಿದ್ದೆ. ನಿಜವೆಂದರೆ, ಯಾರಾದರೂ ಅಲ್ಪಸಂಖ್ಯಾತರು ಎಂಬುದಕ್ಕೆ ವ್ಯಾಖ್ಯೆ ನೀಡುವುದು ಹೇಗೆ?

ದೇಶದಲ್ಲಿ ಮುಸ್ಲಿಮರು ಅಥವಾ ಕ್ರೈಸ್ತರು ಹಿಂದುಗಳಿಗಿಂತ ಅಧಿಕವಾಗಿರುವ ಅದೆಷ್ಟೋ ಜಿಲ್ಲೆಗಳು ಮತ್ತು ಪಟ್ಟಣಗಳಿವೆ. ಅಲ್ಲಿ ಕೋಮು ಹಿಂಸೆ ಅಥವಾ ಗಲಭೆಗೆ ಯಾರನ್ನು ಹೊಣೆಗಾರರಾಗಿ ಮಾಡಬೇಕು? ಉತ್ತರ ಪ್ರದೇಶದಲ್ಲಿ ಮುಸ್ಲಿಮರು ಬಹುಸಂಖ್ಯಾತರಾಗಿರುವ ಒಂದು ಪಟ್ಟಣ ಹಾಗೂ ಹಿಂದುಗಳು ಬಹುಸಂಖ್ಯಾತರಾಗಿರುವ ಒಂದು ಪಟ್ಟಣಗಳಲ್ಲಿ ಗಲಭೆ ಸಂಭವಿಸಿದರೆ ಏನು ಮಾಡುವುದು? ಈ ಎರಡೂ ಪ್ರಕರಣಗಳಲ್ಲಿ ಪೊಲೀಸರು ಏನು ಮಾಡಬಹುದು? ದೇಶದ ಹೊಸ ಶಾಸನ ಹೇಳುತ್ತದೆಂದು ಹಿಂದುಗಳನ್ನು ಮಾತ್ರ ಬಂಧಿಸಿದರೆ ಸಾಕೆ?

ಪ್ರಸ್ತುತ ಮಸೂದೆ ಮತ್ತು ದೇಶದ ಮೇಲೆ ಅದು ಬೀರಬಹುದಾದ ಭಾರೀ ದುಷ್ಪರಿಣಾಮವನ್ನು ತಿಳಿಸುತ್ತಲೇ ಕಾಂಗ್ರೆಸ್ ಪಕ್ಷ ವಿಶೇಷವಾಗಿ ಗಾಂಧಿ ಕುಟುಂಬದ ಒಂದು ವಿಚಿತ್ರದತ್ತ ನಾನು ಗಮನ ಸೆಳೆಯಬೇಕು. ರಾಜೀವ್‌ಗಾಂಧಿ ಅವರು ದೇಶದ ಒಂದು ಭರವಸೆಯಾಗಿ ಮೂಡಿದ್ದ ಹಿನ್ನೆಲೆಯಲ್ಲಿ ನಾನು ಗಾಂಧಿ ಕುಟುಂಬದ ಓರ್ವ ಅಭಿಮಾನಿ ಎಂಬುದು ಹಲವರಿಗೆ ಗೊತ್ತು. ದೇಶಕ್ಕೆ ಅವರು ನೀಡಿದ

ಕೊಡುಗೆಯ ವಿಷಯದಲ್ಲಿ ನನಗೆ ಯಾವುದೇ ಸಂಶಯವಿಲ್ಲ ಆದರೂ ಅವರಿಗೆ ಸಲಹೆಗಾರರು ಮತ್ತು ಸಣ್ಣ ಗುಂಪನ್ನು (ಕಿಚನ್ ಕ್ಯಾಬಿನೆಟ್) ತಮ್ಮ ಆಪ್ತವಲಯದಲ್ಲಿ ಇರಿಸಿಕೊಂಡು ಅದು ಹೇಳಿದ್ದನ್ನೆಲ್ಲ ಮಾಡುತ್ತಾ ಹೋಗುವ ಒಂದು ವಿಚಿತ್ರ ಸ್ವಭಾವವಿದೆ. ಇದರಿಂದ ಅವರಿಗೆ ರಾಜಕೀಯವಾಗಿ ಬಹಳಷ್ಟು ಹಾನಿಯಾದದ್ದು ಕೂಡ ಇದೆ.

ಇಂದಿರಾ ಗಾಂಧಿಯವರಿಗೆ ರಾಜಕೀಯೇತರ ಹಿನ್ನೆಲೆಯ ಹಲವು ಸಲಹೆಗಾರರಿದ್ದರು. ಅವರೆಲ್ಲ ಬದ್ಧರಾದ ಭಾರತೀಯರಾಗಿದ್ದರು. ಆದರೂ ಅವರು ಭಾರೀ ಹಾನಿ ಎಸಗಿದ ಲೈಸನ್ಸ್ ಪರ್ಮಿಟ್ ರಾಜ್‌ಗೆ ಕಾರಣರಾಗಿದ್ದರು, ಇಂದಿಗೂ ನಿಲ್ಲದ ಭ್ರಷ್ಟಾಚಾರದ ಪರಂಪರೆಗೆ ಅದೇ ನಾಂದಿ. ರಾಜೀವ್‌ಗಾಂಧಿಗೆ ಚುನಾವಣಾ ರಾಜಕೀಯದಲ್ಲಿ ಆಸಕ್ತಿ ಇಲ್ಲದ ಹಲವು ಉಜ್ವಲ ಸಲಹೆಗಾರರಿದ್ದರು. ಅವರು ಮೊದಲಿಗೆ ಶಾಬಾನು ಪ್ರಕರಣದಲ್ಲಿ ಏನು ಮಾಡಿದರು, ಅಯೋಧ್ಯೆಯಲ್ಲಿ ಏನು ಮಾಡಿದರು, ಅಂತಿಮವಾಗಿ ಬೊಫೋರ್ಸ್‌ನಲ್ಲಿ ಹೇಗೆ ಪರ್ಯವಸಾನಗೊಳಿಸಿದರು ನೋಡಿ. ಸೋನಿಯಾ ಮತ್ತು ರಾಹುಲ್ ಗಾಂಧಿ ಅದೇ ತಪ್ಪಿನ ಪುನರಾವರ್ತನೆ ಮಾಡುತ್ತಾರೆ ಎಂಬುದೇ ನನ್ನ ಭಯ. ಶಾಬಾನು ಮತ್ತು ಅಯೋಧ್ಯೆಯ ಪ್ರಕರಣದಲ್ಲಿ ರಾಜೀವ್ ಮಾಡಿದ ತಪ್ಪಿನಿಂದಾಗಿ ಬಿಜೆಪಿ ಬೆಳೆದು ಕೇಂದ್ರದಲ್ಲಿ ಅಧಿಕಾರ ಪೀಠವನ್ನು ಏರಿತು. ಈಗ ಈ ಕೋಮುವಾಗಿ ಹಿಂಸಾಚಾರ ಮಸೂದೆಯ ಮೂಲಕ ಸೋನಿಯಾ ಮತ್ತು ರಾಹುಲ್ ದೆಹಲಿಯ ಗದ್ದುಗೆಯನ್ನು ಬಿಜೆಪಿ ತೆರವುಗೊಳಿಸುತ್ತಿದ್ದಾರೇನೋ.

ಇಂತಹ ತಾರತಮ್ಯದ ಮಸೂದೆಗಳ ಮೂಲಕ ದೇಶದಲ್ಲಿ ಕೋಮು ಸಾಮರಸ್ಯವನ್ನು ತರಲು ಅಸಾಧ್ಯ, ಗೌರವ ಯುವಜೀವನಕ್ಕೆ ಬೇಕಾದ ಶಿಕ್ಷಣ ಮತ್ತು ಸಮಾನವಾದ ಅವಕಾಶಗಳನ್ನು ಎಲ್ಲರಿಗೂ ತೆರೆದಿಡುವ ಮೂಲಕ ಅದನ್ನು ತರಲು ಸಾಧ್ಯ. ಅದರಿಂದ ಸರಕಾರ ಇಂತಹ ಶಾಸನಗಳನ್ನು ತರುವ ಬದಲು ಮೇಲೆ ಹೇಳಿದ ವಿಧಾನಗಳನ್ನು ಅನುಸರಿಸುವುದು ಉತ್ತಮ. ಸಮಾನತೆಯ ನೀತಿಗಳು ಹಾಗೂ ಗೌರವಯುತ ಜೀವನಕ್ಕೆ ಅವಕಾಶ ಕಲ್ಪಿಸಿದಾಗ ಸರಕಾರ ಇಂದು ಪೇಚಾಡುತ್ತಿರುವ ಎಷ್ಟೋ ಸಮಸ್ಯೆಗಳು ಪಲಾಯನಗೈಯಲು ಸಾಧ್ಯ.

---

ಲೇಖಕರು : 'ದಿ ಸಂಡೇ ಇಂಡಿಯನ್' ಪತ್ರಿಕಾ ಸಮೂಹದ ಪ್ರವರ್ತಕರು

# ಹೀಗಿರುತ್ತದೆ ಸರಕಾರಿ ತಾಲಿಬಾನಿಕರಣ!

■ **ಸಂತೋಷ್ ತಮ್ಮಯ್ಯ**

ದೆಹಲಿ ದರ್ಬಾರಿನ ವಿಶೇಷತೆಯೆಂದರೆ ಅದು. ಏಕೆಂದರೆ ದೆಹಲಿಯ ಗಾದಿಯಲ್ಲಿ ಕೂತವರಿಗೆಲ್ಲರಿಗೂ ಕೆಲವು ವಿಷಯದಲ್ಲಿ ಸಾಮ್ಯತೆ ಕಂಡುಬರುತ್ತದೆ. ನಮ್ಮ ಕಣ್ಣಳತೆಗೆ ನಿಲುಕುವ ಇತಿಹಾಸವನ್ನೇ ನೋಡಿದರೂ ಅದರಲ್ಲಿ ಅತಿಶಯೋಕ್ತಿಗಳಿಲ್ಲ. ಅದಕ್ಕೇ ಏನೋ ತುಘಲಕನಂಥ ಹುಚ್ಚು ದೊರೆ ದೇವಗಿರಿಗೆ ಬಂದರೂ ಮತ್ತೆ ಹಳೇ ದಿಲ್ಲಿಯೇ ಆತನಿಗೆ ಕಾಡುತ್ತಿತ್ತು. ಔರಂಗಜೇಬನ ಅಪ್ಪ ಮಗನನ್ನು ಬಿಜಾಪುರ–ಗೋಲ್ಕೊಂಡಾಕ್ಕೆ ಕಳುಹಿಸಿದಾಗಲೂ ಮಗ ದಿಲ್ಲಿಗಾಗೇ ಹವಣಿಸಿದ್ದ. ಸೋದರಹತ್ಯೆಯನ್ನೂ ಮಾಡಿದ್ದ. ಮತ್ತೆ ಅಕ್ಬರ, ಕೊನೆಯ ಮೊಗಲ, ಮುದುಕ ಬಹಾದೂರ್ ಶಾ ಜಾಫರ ಎಲ್ಲರೂ ದಿಲ್ಲಿಗಾಗಿ ಹಾತೊರೆದವರೇ. ದಿಲ್ಲಿಯನ್ನು ಬಿಟ್ಟುಕೊಡದವರೇ. ಮಲ್ಲಿಕಾಫರನಿಂದ ಹಿಡಿದು ಅಂಟೋನಿಯೇ ಮೈನೋ ಸೋನಿಯಾವರೆಗೆ ದಿಲ್ಲಿಯ ಕಥೆ ರೋಚಕವಾಗಿ, ಭೀಕರವಾಗಿ, ಭೀಭತ್ಸವಾಗಿ ಮುಂದುವರಿಯುತ್ತದೆ. ದಿಲ್ಲಿಯ ಪಾಡು ಪರಿಪಾಟಲುಗಳನ್ನು ಬಿಟ್ಟು ಭಾರತವನ್ನು ವಿಮರ್ಶಿಸುವಂತೆಯೇ ಇಲ್ಲವೆನ್ನುವಷ್ಟರ ಮಟ್ಟಿಗೆ ರಾಜಧಾನಿ ಭಾರತದ ಪಾಲಿಗೆ ಅವಿನಾಭಾವಿ.

ಹಳೇ ದಿಲ್ಲಿಯಲ್ಲಿ ಕೂತೇ ಸಮಸ್ತ ಹಿಂದುಸ್ಥಾನವನ್ನು ಗುಲಾಮಿಗಳು, ತುಘಲಕರು, ಲೋಧಿಗಳು, ಮೊಗಲರು ಆಳಿದ್ದರು. ಉತ್ತರದ ಆ ತುದಿಯಲ್ಲಿ ಕೂತು ದಕ್ಷಿಣದ ತುತ್ತತುದಿಯಿಂದ ಜಜಿಯಾ ಸಂಗ್ರಹಿಸುತ್ತಾ, ಜನಾನಾವನ್ನು ತುಂಬಿಸಿಕೊಳ್ಳುತ್ತಾ ದೇಶವನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡ ಮುಸಲ್ಮಾನ ದೊರೆಗಳು ತಮ್ಮ ಕ್ರೌರ್ಯದಿಂದಲೂ ಹುಚ್ಚುತನದಿಂದಲೂ ಭಯೋತ್ಪಾದನೆಯಿಂದಲೂ ಮಣ್ಣಿನ ಮಕ್ಕಳಾದ ಹಿಂದುಗಳನ್ನು ಅಕ್ಷರಶಃ ಕಾಡಿದರು, ಹೆದರಿಸಿದರು. ಅನಂತರ ಪಾಶ್ಚಾತ್ಯರು ಬಂದರು. ಅದರಲ್ಲೂ ಸಾವಿರಾರು ಮೈಲು ದೂರದ ಇಂಗ್ಲಿಷರು ಪುನಃ ಅದೇ ಹಳೆಯ ಮುಸ್ಲಿಂ ಪರಂಪರೆಯನ್ನು ಮುಂದುವರೆಸಿದರು. ಒಡೆದು ಆಳಿದರು. ಒಬ್ಬರಿಗೆ ಬೆಣ್ಣೆ ಕೊಟ್ಟರು. ಮತ್ತೊಬ್ಬರಿಗೆ ಸುಣ್ಣ ಕೊಟ್ಟರು. ಬೆಣ್ಣೆಯ ರುಚಿ ಆಗಲೇ ಮುಸಲ್ಮಾನರಿಗೆ ಹತ್ತಿತು. ಎಲ್ಲವೂ ಅವರ ಆಕಾಂಕ್ಷೆಗಳಿಗೆ ಅನುಗುಣವಾಗಿಯೇ ನಡೆದವು. ಎರಡೆರಡು ಹೊಸ ದೇಶಗಳು, ಕೋಟಿಕೋಟಿ ರೂಪಾಯಿಗಳು ಎಲ್ಲಾ ಸಿಕ್ಕವು. ಎಲ್ಲವನ್ನೂ ಹಿಂದೂವಿನ ಕೈಯಿಂದ ಕಿತ್ತೇ ಕೊಡಲಾಯಿತು. ಮಧ್ಯಕಾಲದ ಮುಸಲ್ಮಾನ ಅರಸರು ತಮ್ಮವರಿಗೆ ಒದಗಿಸಿದ್ದನ್ನೆಲ್ಲಾ ಬ್ರಿಟಿಷರೂ ಒದಗಿಸಿದರು. ಕೊನೆಗೆ ಸ್ವಾತಂತ್ರ್ಯ ಬರುವ ಹೊತ್ತಿಗೆ ಹಿಂದು ಮಾತ್ರ ಪಂಜಾಬ್ ಎಲ್ಲಿ? ಬಂಗಾಳವೆಲ್ಲಿ ? ಸಿಂಧ್ ಎಲ್ಲಿ ಎನ್ನುತ್ತಾ ಗೋಳಾಡುತ್ತಿದ್ದ.

ಅನಂತರ ದಿಲ್ಲಿಯ ಗಾದಿಗೆ ಕಾಂಗ್ರೆಸ್ ಬಂತು. ಅದು ಮಾಡಿದ್ದೂ ಅದೇ ಕೆಲಸ. ಮೊಗಲರಂತೆ, ಬ್ರಿಟಿಷರಂತೆ. ಅಂದು ಜಜಿಯಾ ಇದ್ದಂತೆ ಇಂದು ಹಿಂದೂ ದೇವರ ಹುಂಡಿಗೆ ಕೈಹಾಕಿ ಮುಸಲ್ಮಾನರ ತೀರ್ಥಯಾತ್ರೆ ಆಯೋಜಿಸಿತು. ನೆಹರೂನಂಥ ಪ್ರಧಾನಿಯೇ ಬಂದು ಕೂತರು. ಸೈನ್ಯದಲ್ಲಿ ಮುಸ್ಲಿಂ ಪ್ರಾತಿನಿಧ್ಯ ಹೆಚ್ಚಬೇಕೆಂದು 1953ರಲ್ಲಿ ನೆಹರೂ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸುತ್ತೋಲೆಯನ್ನೂ ಕಳುಹಿಸಿದ್ದರು. ಇದು ವೈಸರಾಯ್ ಆಳ್ವಿಕೆಗಿಂತ ಹೇಗೆ ಭಿನ್ನ? ಹೇಗೆ ಮಾಂಟೆಗ್ಯೂ-ಚೆಲ್ಮ್ಸ್‌ಫರ್ಡ್ ಅಲ್ಪಸಂಖ್ಯಾತರನ್ನು ಎತ್ತಿಹಿಡಿದು ಹಿಂದುವನ್ನು ತುಳಿದನೋ ಹಾಗೆಯೇ ಸಾಚಾರ್ ವರದಿಗಳು ಬಂದವು. ಅನಂತರ ಫೀರ್‌ಪುರ ವರದಿ, ಶರೀಫ್ ವರದಿ, ಕಮಟ್‌ಯಾರ್ ಜಂಗ್ ವರದಿ, ಫಜಲ್ ಹಕ್ ವರದಿಗಳು ಬಂದವು. ಎಲ್ಲಾ ಮುಸಲ್ಮಾನರನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುವ ವರದಿಗಳೇ. ಲಾಲನೆ, ಪಾಲನೆಯ ಸವಿಮಾತುಗಳೇ. ಹೇಗೆ 1871ರಲ್ಲಿ ಹಂಟರನೆಂಬ ಬ್ರಿಟಿಷ "ಮುಸಲ್ಮಾನರ ಹಿಂದುಳಿದಿರುವಿಕೆಗೆ ಹಿಂದುಗಳೇ ಕಾರಣ" ಎಂದು ವರದಿ ಬರೆದನೋ ಹಾಗೆಯೇ ರಾಜೇಂದ್ರ ಸಾಚಾರ್ ಎಂಬ ಭಾರತೀಯ ಕೂಡ "ಭಾರತದಲ್ಲಿ ಶರಿಯತ್ ಜಾರಿಯಾಗಲಿ" ಎಂದು ವರದಿ ಬರೆದು ಒಪ್ಪಿಗೆಗಾಗಿ ಕಾಯುತ್ತಾರೆ. ರಂಗನಾಥ ಮಿಶ್ರಾ ಎಂಬವರೂ ಮುಸ್ಲಿಂ ಮೀಸಲಿಗೆ ಒಪ್ಪಿಗೆ ಕಾಯುತ್ತಾರೆ. ಇದು ಹಿಂದೂಗಳ ಅವಸ್ಥೆ. ಹಾಗಾದರೆ ಮಧ್ಯಯುಗಕ್ಕೂ ಜಾಗತೀಕರಣದ ಈ ಕಾಲಕ್ಕೂ ಹಿಂದುಗಳ ದಮನ ತಂತ್ರಗಳಲ್ಲಿ ವ್ಯತ್ಯಾಸವಾಗಿದೆಯೇ? ದಿಲ್ಲಿಯವರದ್ದು ಯಾವಾಗಲೂ ವಕ್ರದೃಷ್ಟಿಯೇ?

ಹೀಗೆ ಯೋಚಿಸುತ್ತಿರುವಾಗಲೇ ಅದೇ ದಿಲ್ಲಿಯಿಂದ ಮತ್ತೊಂದು ತಂತ್ರ ಸಿದ್ಧವಾಗುತ್ತಿದೆ. ಮತ್ತದೇ ಹಿಂದುಗಳನ್ನು ಮಣಿಸಲು ತಂತ್ರ. ಇದುವರೆಗೆ ಹಿಂಬಾಗಿಲು. ಇದೀಗ ಮುಂಬಾಗಿಲಲ್ಲೇ ಆಕ್ರಮಣ. ಅದು Prevention of communal and targeted violence (Access to justice and reparation) bill-2011. ಅಂದರೆ ಕೋಮುಗಲಭೆ ನಿಯಂತ್ರಣ ಕಾಯ್ದೆ. ಹೆಸರೇನೋ ಚೆನ್ನಾಗಿದೆ. ಆದರೆ ರ್‍ಯಾಪರ್‌ನೊಳಗೆ ಚಾಕಲೇಟಿಲ್ಲ. ಚಾಕಲೇಟ್ ರ್‍ಯಾಪರಿನೊಳಗೆ ಸಯನೈಡ್ ಸುತ್ತಿ ಕೊಟ್ಟಂಥ ಕಾಯ್ದೆ ಈ ಕೋಮುಗಲಭೆ ನಿಷೇಧ ಕಾಯ್ದೆ. ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಇದು ಮಂಡನೆಯಾಗಲಿದೆ. ಯುಪಿಎ ಈ ಕಾಯ್ದೆಯ ಮೂಲಕ ಚಳಿ ಕಾಯಿಸಿಕೊಳ್ಳುತ್ತದೆ. ಬ್ರಿಟಿಷ್ ಕಾಲದ ಪುನರಾವರ್ತನೆ, ನೆನಕೆ ಮಾಡುವ ಈ ಕಾನೂನು ಮೊಗಲ್ ಆಳ್ವಿಕೆಗಿಂತ ಭಿನ್ನವಾಗಿಲ್ಲ ಎಂಬುದು ಕಾಯ್ದೆಯ ವಿಶೇಷತೆ. ಬರೋಬ್ಬರಿ 9 ಅಧ್ಯಾಯಗಳು, 138 ವಿಧಿಗಳು ಎಲ್ಲವೂ ಹಿಂದೂವಿನತ್ತಲೇ ಬೊಟ್ಟು ಮಾಡುತ್ತದೆ. ಹಿಂದುವೊಬ್ಬ ಮುಸಲ್ಮಾನೊಡನೆ ತಗ್ಗಿ ಬಗ್ಗಿ ನಡೆಯಬೇಕು. ಬಗ್ಗಬೇಕು. ಗುದ್ದಿದರೆ ಗುದ್ದಿಸಿಕೊಳ್ಳಬೇಕು. ಸಾಧ್ಯವಾದರೆ ತೆವಳಬೇಕು. ಹೊರಳಾಡಬೇಕು ಎಂಬ ಚಿಂತನೆಯ ಈ ಕಾಯ್ದೆ ಜಾರಿಗೆ ಬಂದದ್ದೇ ಆದಲ್ಲಿ ಇನ್ನು ಹಿಂದೂ ದಮನದ ಪ್ರಶ್ನೆಯೇ ಉದ್ಭವಿಸದು. ಏಕೆಂದರೆ ಕಾಯ್ದೆ ಹಿಂದುವನ್ನು ನಿರ್ವೀರ್ಯವನ್ನಾಗಿ ಮಾಡಿಬಿಟ್ಟಿರುತ್ತದೆ. ಕೋಮುಗಲಭೆಗೆ ಹಿಂದುವೇ ಮೂಲ ಕಾರಣ ಎಂಬ ತಳಹದಿಯಲ್ಲಿ ರಚನೆಯಾಗಿರುವ ಈ ಕಾನೂನು ಅದರ ಮುನ್ಸೂಚನೆಯನ್ನು ಹೀಗೆ ಮಾಡುತ್ತದೆ.

ಹಿಂದು ತನ್ನ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವಂತಿಲ್ಲ. ಅಖಂಡ ಭಾರತ ಎನ್ನುವಂತಿಲ್ಲ. ಎಂದರೆ ಅದು ಕೋಮುಸಾಮರಸ್ಯಕ್ಕೆ ದಾರಿ ಎಂದು ಕಾನೂನು ಹೇಳುತ್ತದೆ. ಗೋಹತ್ಯೆ ನಿಷೇಧದ ಸಭೆ ನಡೆಯುವುದಿಲ್ಲ. ನಡೆದರೆ ಅದು ಮುಸಲ್ಮಾನರ ಆಹಾರದ ಹಕ್ಕನ್ನು ಕಿತ್ತುಕೊಂಡಂತೆ ಎಂಬ ಆರೋಪ. ಅಯೋಧ್ಯೆ ವಿಷಯದಲ್ಲಿ ಮಾತಾಡುವಂತಿಲ್ಲ. ಆಡಿದರೆ ದೇಶದ ಸಾರ್ವಭೌಮತೆಗೂ ಮುಸಲ್ಮಾನರ ಧಾರ್ಮಿಕ ನಂಬಿಕೆಗೂ ಅವಹೇಳನ ಮಾಡಿದಂತೆ ಎನ್ನುವ ಕಾನೂನು ಹಿಂದುವಿಗೆ ಶಿಕ್ಷೆ ವಿಧಿಸುತ್ತದೆ. ಅಲ್ಲದೆ ಜಾಮೀನುರಹಿತ ವಾರಂಟು ಹೊರಡಿಸುತ್ತದೆ. ನೀವು ಬಸ್ಸಲ್ಲಿ ಪ್ರಯಾಣಿಸುತ್ತಿದ್ದೀರಿ ಎಂದಿಟ್ಟುಕೊಳ್ಳಿ. ಜಂಗುಳಿಯ ನಡುವೆ ಒಬ್ಬನ ಕಾಲನ್ನು ತುಳಿಯುತ್ತೀರಿ ಎಂದಿಟ್ಟುಕೊಳ್ಳಿ. ಆತ ಮೊಕದ್ದಮೆ ದಾಖಲಿಸಿದರೆ ನೀವು ಅಪರಾಧಿಗಳಾಗುತ್ತೀರಿ. ಆದರೆ ನೀವು ಹಿಂದುವಾಗಿರಬೇಕು. ಆತ ಮುಸಲ್ಮಾನನಾಗಿರಬೇಕು. ನಿಮ್ಮ ಮನೆಯ ಗೋವು ಕಳವಾಯಿತು. ಕಳ್ಳನನ್ನು ಹಿಡಿದಿರುತ್ತೀರಿ. ಗದರಿಸಿಯೂ ಇರುತ್ತೀರಿ ಎಂದಿಟ್ಟುಕೊಳ್ಳಿ, ನಿಮಗೆ ಜಾಮೀನುರಹಿತ ವಾರಂಟು ಬೀಳಲು ಅಷ್ಟೇ ಸಾಕು. ಮನೆ ಮಗಳನ್ನು ಪೋಲಿ ಮುಸಲ್ಮಾನನೊಬ್ಬ ಚುಡಾಯಿಸಿರುತ್ತಾನೆ. ಆದರೆ ಏನೂ ಮಾಡುವಂತಿಲ್ಲ. ಏಕೆಂದರೆ ಕೇಂದ್ರ ಸರಕಾರದ ಕಾಯ್ದೆಯ ಬಲ ಆತನಿಗಿದೆ. ಊರ ದೇವಸ್ಥಾನದ ಬ್ರಹ್ಮಕಲಶವೋ ಮೆರವಣಿಗೆಯೋ ಜಾತ್ರೆಯೋ ರಥೋತ್ಸವವೋ ಭಂಡಾರ ಹೊರಡುವುದೋ ಆದರೆ ಅದು ಮುಸಲ್ಮಾನ ವಸತಿ ಪ್ರದೇಶದಲ್ಲಿ, ಮಸೀದಿ, ಮದರಸಗಳ ಪ್ರದೇಶದಲ್ಲಿ ಹೊರಡುವುದನ್ನೂ ಮುಸಲ್ಮಾನರು ಇನ್ನು ಕೇಸು ದಾಖಲಿಸಿ ಶಾಂತಿ ಭಂಗ ಎನ್ನಬಹುದು. ಏಕೆಂದರೆ ಕಾಯ್ದೆಯ ಬಲ. ಹೆದ್ದಾರಿಯಲ್ಲಿ ಗೋ ಕಳ್ಳಸಾಗಾಣಿಕೆ ಯಾಗುತ್ತಿದ್ದರೆ ತಡೆಯುವಂತಿಲ್ಲ. ಏಕೆಂದರೆ ಗೋಹತ್ಯಾ ನಿಷೇಧ ಕಾನೂನಿಲ್ಲ. ಗೋಪ್ರೇಮಿಗಳು ತಡೆದರೂ ಹೆಚ್ಚು ವಿಚಾರಿಸುವಂತಿಲ್ಲ. ಕಳ್ಳರೂ ಕೇಸು ದಾಖಲಿಸಿ ವ್ಯಾಪಾರಕ್ಕೆ ಅಡ್ಡಿ ಎಂದು ಮೊಕದ್ದಮೆ ಹೂಡಬಹುದು. ದುಷ್ಟ ಮನಸಿನ ವ್ಯಕ್ತಿಗಳು ವಿನಾಕಾರಣ ಕೆಣಕಿ ಆತನೇ ಕೇಸು ಹೂಡಬಹುದು. ಏಕೆಂದರೆ ಕಾಯಿದೆ ಆತನ ಪರ. ಒಟ್ಟಾರೆ ಹಿಂದುಗಳು ಮುಸಲ್ಮಾನರ ಮುಂದೆ ಮೈಬಗ್ಗಿಸಿ, ತಲೆತಗ್ಗಿಸಿ ನಡೆಯಬೇಕು. ಹಾಗೇ ಬದುಕಬೇಕು. ಮಾತಿನ ಧ್ವನಿ ಮೆದುವಾಗಿರಬೇಕು.

ಎಲ್ಲವೂ ಅಂದುಕೊಂಡಂತೆ ನಡೆದರೆ ಇವೆಲ್ಲಾ ಮುಂಬರುವ ಚಳಿಗಾಲದ ಅಧಿವೇಶನದ ನಂತರ ಜಾರಿಗೆ ಬರಲಿದೆ. ಎಂಥಾ ತಂತ್ರ ಹೆಣೆದಿದೆ ನೋಡಿ ಯುಪಿಎ!

ಏಳೆಂಟು ವರ್ಷಗಳ ಹಿಂದಿನ ಮಾತು. ಎನ್‌ಡಿಎ ಅಧಿಕಾರ ಕಳೆದುಕೊಂಡಿತ್ತು. ಯುಪಿಎ ಬಂದಿತ್ತು. ಅದುವರೆಗೆ ಅಬ್ಬರಿಸುತ್ತಿದ್ದವರೆಲ್ಲಾ ದಿಲ್ಲಿಯಲ್ಲಿ ಕೂತಿದ್ದರು. ಹಿಂದು ಎಂದರೆ ಅಕಟಕಟಾ ಎನ್ನುವವರು ಬಂದಾಗಲೇ ಜನ ಸೋನಿಯಾ ಗಾಂಧಿ ಹಿಂದು ಸಂಘಟನೆಗಳನ್ನು ಹಣಿಯದಿರಲಾರರು ಎಂದು ಆಡಿಕೊಂಡಿದ್ದರು. ಮುಖ್ಯವಾಗಿ ಸಂಘ ಪರಿವಾರದ ನಿಷೇಧಕ್ಕೆ ತಕ್ಕ ಗಳಿಗೆ, ತಕ್ಕ ಸಂದರ್ಭ ಕಾಯುತ್ತಿದ್ದಾರೆ ಎಂದು ಎಲ್ಲೆಡೆ ಮಾತು ಕೇಳಿಬರುತ್ತಿತ್ತು. ಆದರೆ ವರ್ಷಗಳು ಉರುಳುತ್ತಿದ್ದಂತೆ ನಿಷೇಧದ ಮಾತು ಸೋನಿಯಾರಿಂದ ಬರಲೇ ಇಲ್ಲ. ಯಾವ ಕಾಂಗ್ರೆಸಿಗನ, ಕಮ್ಯೂನಿಸ್ಟನ, ಮುಸ್ಲಿಮನ, ಬುದ್ಧಿಜೀವಿಯ ಬಾಯಿಂದ ಕೂಡ ಆ ಮಾತು ಬರಲೇ ಇಲ್ಲ. ದಿಗ್ವಿಜಯ

ಸಿಂಗನಂಥವನೂ ಕೂಡ ಕೇಸರಿ ಭಯೋತ್ಪಾದನೆ, ಹಿಂದೂ ಉಗ್ರವಾದ ಎಂದು ಬಾಯಿ ಬಡಕೊಂಡನೇ ಹೊರತು ಸಂಘ ಪರಿವಾರ ನಿಷೇಧವಾಗಬೇಕೆಂದು ಹೇಳಿಕೆ ನೀಡಿರಲಿಲ್ಲ. ದುಷ್ಟಕೂಟಗಳು ಒಗ್ಗೂಡಿದರೂ ಅದೊಂದು ಮಾತು ಯಾಕೆ ಕೇಳಿಬರಲಿಲ್ಲ ಎಂದು ಆಶ್ಚರ್ಯಪಟ್ಟವರು ತುಂಬಾ ಜನರಿದ್ದರು. ಹಾಗೆ ತಾನೇ ಹೇಳಿಯಾನು? ಕೊಲೆ ಮಾಡಿ ಪಾಪಿ ಎನಿಸಿಕೊಳ್ಳುವುದಕ್ಕಿಂತ ಸಂತಾನಹರಣ ಮಾಡಿಬಿಡುವುದೇ ಉತ್ತಮ ಎಂಬ ತಂತ್ರ ಹೊಳೆದಿರುವಾಗ ನಿಷೇಧದ ಮಾತು ಬರಲಾದರೂ ಹೇಗೆ ಸಾಧ್ಯ? ಏಕೆಂದರೆ ಕಾಯ್ದೆಯ ಎಲ್ಲಾ ಅಂಶಗಳು ಹಿಂದೂ ಸಂಘಟನೆಗಳನ್ನು ಹಣಿಯಲೆಂದೇ ಸೃಷ್ಟಿಯಾಗಿವೆ. ಅದರ ಎಲ್ಲಾ ಹಗ್ಗಗಳು ಹಿಂದೂ ಸಂಘಟನೆಯ ಕುತ್ತಿಗೆಗೆ ಸರಿಯಾಗಿಯೇ ನಿರ್ಮಾಣಗೊಂಡಿವೆ. ಏಕೆಂದರೆ ಸಂಘ ಪರಿವಾರದ ಜಾಗರಣ ಕಾರ್ಯಗಳೆಲ್ಲವೂ ತಳಮಟ್ಟದಲ್ಲಿ ಹಿಂದುವನ್ನು ಎಚ್ಚರಿಸುವ ಕೆಲಸ ಮಾಡುತ್ತವೆ ಎಂಬುದನ್ನು ಸರಕಾರ ತಿಳಿದುಕೊಂಡಿದೆ. ಅದಕ್ಕಾಗಿ ತಳಮಟ್ಟದಲ್ಲೇ ಹಿಂದುವನ್ನು ಕೆಡವಲು ತಂತ್ರ ಹೂಡಿದ್ದಾರೆ. ಈ ಕಾಯ್ದೆಯೇನಾದರೂ ಬಂದರೆ ಇನ್ನು ಮುಂದೆ ಸಂಘ ಪರಿವಾರ ಮಾಡುವ ಬೌದ್ಧಿಕ್‌ಗಳ ಮೇಲೂ ಕಾಯ್ದೆ ಕಣ್ಣಿಡಲಿದೆ. 'ಹಿಂದೂ ರಾಷ್ಟ್ರ', 'ಅಖಂಡ ಭಾರತ' ಎಂದೇನಾದರೂ ಬೌದ್ಧಿಕ್ ಮಾಡಿದರೋ ಬೌದ್ಧಿಕ್ ಮಾಡಿದಾತನ ಮೇಲೆ ವಾತಾವರಣವನ್ನು ಕಲುಷಿತಗೊಳಿಸುವ ಆಪಾದನೆಯ ಮೇಲೆ ಬಂಧಿಸಲಾಗುತ್ತದೆ. ಯುಗಾದಿ, ವಿಜಯದಶಮಿ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುವ ಸಂಘ ಪರಿವಾರದಲ್ಲಿ 'ರಾಷ್ಟ್ರಕ್ಕಾಗಿ ಸಂಕಲ್ಪಗೈಯೋಣ' ಎಂದೇನಾದರೂ ಹೇಳಿದರೆ, ಮುಸಲ್ಮಾನನೊಬ್ಬ ಕೇಸು ದಾಖಲಿಸಿದರೆ, ಕಾಯ್ದೆ ಆ "ಸಂಕಲ್ಪವೇನು?" ಎಂದು ವಿವರಣೆ ಕೇಳಲಿದೆ. ಸಮಾಜೋತ್ಸವಗಳಂತೂ ಕನಸಿನ ಮಾತಾಗಲಿವೆ. ಸಂಘ, ನಡೆಸುವ ಪಥಸಂಚಲನ ಕೋಮುಭಾವನೆ ಬಿತ್ತುವ, ಸಮಾಜವನ್ನು ಕೆರಳಿಸುವ ಸಂಗತಿಗಳಾಗಲಿವೆ. ವಿಚಿತ್ರ ಎಂದರೆ ಅಲ್ಪಸಂಖ್ಯಾತರೆಂಬ ಮುಸಲ್ಮಾನರಿಗೆ ಇದು ಅನ್ವಯಿಸುವುದಿಲ್ಲ. ಅಲ್ಪಸಂಖ್ಯಾತರೇ ಬಹುಸಂಖ್ಯಾತರಾಗಿರುವ ಊರುಗಳಲ್ಲೂ ಇದು ಮುಸಲ್ಮಾನರಿಗೆ ಅನ್ವಯಿಸುವುದಿಲ್ಲ. ಹಿಂದುಗಳಾದವರು ಇನ್ನು 'ಭಯೋತ್ಪಾದನೆ ಊರೂರಲ್ಲೂ ಬೆಳೆಯುತ್ತಿದೆ' ಎಂದು ಬರೆಯಬಾರದು. 'ಜಿಹಾದ್ ಮಾನಸಿಕತೆ' ಎಂದು ತಪ್ಪಿಯೂ ಬಳಸಲಾರರು. 'ಮಕ್ಕಳನ್ನು ಅಡವಿಟ್ಟವನು ಅರಸನೆ?' ಎಂದು ಕೇಳಬಾರದು, 'ಲವ್ ಜಿಹಾದ್' ಎನ್ನಲೇಬಾರದು ಇನ್ನೇನಿದ್ದರೂ 'ಲವ್' ಮಾತ್ರ. ಹಿಂದೂ ಹುಡುಗಿ ಗರ್ಭಧರಿಸಿ, ಕೆರೆಗೆ ಬಿದ್ದು ಸಾಯಲಿ ಅದು ಮತಾಂಧ ಮಾನಸಿಕತೆ ಎನ್ನಲಂತೂ ಬಾರದು. ಕಾಶೀ ವಿಶ್ವನಾಥ, ದತ್ತಪೀಠಗಳೆಲ್ಲಾ ಇನ್ನು ಶೋಕಿಯ ಸೆಕ್ಯುಲರಿಸಮ್ಮಿಗೆ ಸಂಕೇತಗಳು. ಡೊಗ್ಗು ಸಲಾಮು, ಹಲ್ಲುಗಿಂಜಿ ಅಣ್ಣಾ ತಮ್ಮ ಸಂಬೋಧನೆಗಳ ನೆಂಟಸ್ತನ, ಸ್ವಾಭಿಮಾನದ ಕ್ಷಯ, ಭಂಡತನದ ಬದುಕಿನ ಆರಂಭ. ಒಂದು ವೇಳೆ ಹಿಂದೂ ಎನ್ನುವುದರ ವ್ಯಾಖ್ಯಾನ ಮಾಡಲಾರಂಭಿಸಬೇಕು ಎಂದರೆ ಜೈಲಿಗೆ ಹೋಗಲು ಸಿದ್ಧವಾಗಿರಬೇಕು. ಇಷ್ಟೆಲ್ಲಾ ತಂತ್ರ ಹೆಣೆದಿರುವಾಗ ಯಾರಾದರೂ ನಿಷೇಧದ ಮಾತು ಆಡುತ್ತಾರೆಯೇ?

ಅಷ್ಟಕ್ಕೂ ದೇಶದ ಎಲ್ಲಾ ಗಲಭೆಗಳಿಗೆ ಹಿಂದುವೇ ಕಾರಣ ಎಂಬುದೇನಾದರೂ ಇದ್ದಿದ್ದರೆ ಈ ಕಾಯ್ದೆಗೊಂದು ಅರ್ಥವಿರುತ್ತಿತ್ತು. ಇಷ್ಟರವರೆಗೂ ಹಿಂದುವಿನಿಂದ

ಒಂದೇ ಒಂದು ಕೋಮುಗಲಭೆ ಉಂಟಾದ ಉದಾಹರಣೆ ದೇಶದ ಚರಿತ್ರೆಯಲ್ಲೇ ಇಲ್ಲ. ಹಿಂದು ಗೋಹತ್ಯೆ ಬೇಡ ಎಂದಾಗ, ಮತಾಂತರ ನಡೆಸದಿರಿ ಎಂದಾಗ ಕೆಣಕಿದವರು ಯಾರು? ಹಿಂದು ದೇವರ ಉತ್ಸವಕ್ಕೆ, ಸಮಾಜೋತ್ಸವಗಳಿಗೆ ಕಲ್ಲು ಹೊಡೆದವರು ಯಾರು? ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಂಡರೆ ಅಲ್ಲಿ ಕಾಣುವುದೇನು? ಜನಾನುರಾಗಿ ಭಟ್ಕಳದ ಡಾ. ಚಿತ್ತರಂಜನ್‌ರನ್ನು ವಿನಾಕಾರಣ ಕೊಂದು ಗಲಭೆ ಎಬ್ಬಿಸಿದ್ದು, 1983ರಲ್ಲಿ ಬೆಳ್ತಂಗಡಿಯಲ್ಲಿ ಆನಂದ ಮತ್ತು ನೋಣಯ್ಯ ಎಂಬ ಇಬ್ಬರನ್ನು ಮತಾಂತರಿಸಿದಾಗ ಪ್ರಶ್ನೆ ಮಾಡಿದ ಹಿಂದುಗಳಿಗೆ ಹೊಡೆದು ಗಲಭೆ ಎಬ್ಬಿಸಿದ್ದು, 2009–10ರಲ್ಲಿ ಕ್ಯಾತಮಾರನಹಳ್ಳಿಯ ಹಿಂದು ಮನೆಗಳಿಗೆ ಕಾರಣ ವಿಲ್ಲದೇ ನುಗ್ಗಿ ಹೊಡೆದಿದ್ದು, 2002ರಲ್ಲಿ ಕೊಡಗಿನ ಹರಿಶ್ಚಂದ್ರ ದೇವಾಲಯವನ್ನು ಒಡೆದು ಗಲಭೆ ಎಬ್ಬಿಸಿದ್ದು, 2008ರಲ್ಲಿ ಗೋಕಳ್ಳರು ಹಿಂದೂ ಹುಡುಗರನ್ನು ಹೊಡೆದು ಮೂರು ವಾಹನಗಳನ್ನು ಜಖಂಗೊಳಿಸುತ್ತಾ ಸಾಗಿದ್ದು, 1995ರಲ್ಲಿ ದಕ್ಷಿಣ ಕನ್ನಡದ ಖ್ಯಾತ ದೇಗುಲ ಪೊಳಲಿಗೆ 'ಪಟ್ಟೆಸೀರೆ' ಮೆರವಣಿಗೆ ಸಂದರ್ಭ ದಾಳಿ ಮಾಡಿದ್ದು, ಕಲ್ಲಡ್ಕದಲ್ಲಿ ವಿನಾಕಾರಣ ಹಿಂದೂ ಹಬ್ಬಗಳ ಮೇಲೆ ನಿರಂತರ ದಾಳಿಯಾಗಿದ್ದು, ಡೆನ್ಮಾರ್ಕ್ ಪತ್ರಿಕೆಯಲ್ಲಿ ಬಂದ ಒಂದು ಚಿತ್ರಕ್ಕೆ ಕರ್ನಾಟಕದಲ್ಲಿ ಬೆಂಕಿ ಎದ್ದಿದ್ದು, ಸದ್ದಾಂನ ಸಾವಿಗೆ ಬಿ.ಎಂ.ಟಿ.ಸಿ. ಬಸ್ಸುಗಳು ಬೆಂಕಿಗಾಹುತಿಯಾಗಿದ್ದು, 2010ರಲ್ಲಿ ಶಿವಮೊಗ್ಗದ ಸಂಘ ಕಾರ್ಯಾಲಯಕ್ಕೆ ದಾಳಿ ಮಾಡಿ ಗಲಭೆ ಎಬ್ಬಿಸಿದ್ದು – ಇವರೆಲ್ಲಾ ಯಾರು? ಇದನ್ನೆಲ್ಲಾ ಕೇವಲ ಕೋಮು ಗಲಭೆ ಎನ್ನಬೇಕೋ ಅಥವಾ ಭಯೋತ್ಪಾದನಾ ಕೃತ್ಯವೆನ್ನಬೇಕೋ? ಇಂಥವರನ್ನು ಬೆಂಬಲಿಸುವ ಕಾನೂನು ತಾಲೀಬಾನಿಕರಣಕ್ಕೆ ಆಸ್ಪದ ಕೊಡುತ್ತಿಲ್ಲವೇ? ಅದನ್ನು ಸರಕಾರೀ ತಾಲೀಬಾನೀಕರಣ ಎಂದೇ ಹೇಳಬೇಕಲ್ಲದೆ ಬೇರೆ ಪದಗಳು ಸಾಲವು. ಪೋಟಾ ಕಾಯ್ದೆ ಕಿತ್ತು ಹಾಕಿದವರು ಈಗ ಜಾರಿಗೊಳಿಸಲು ಹೊರಟಿರುವುದು ಇಂಥ ಕಾಯ್ದೆ. ಇದನ್ನು ಷಂಡತನವೆನ್ನಬೇಕೋ ಭಂಡತನ ವೆನ್ನಬೇಕೋ ಗೊಂದಲವಾಗುತ್ತದೆ.

ದಿಲ್ಲಿಯರಸರನ್ನು ಏನಾದರೂ ಒಂದು ಹೆಸರಿನಲ್ಲಿ ಕರೆಯಬೇಕಲ್ಲ?

---

ಲೇಖಕರು : 'ಅಸೀಮಾ' ಮಾಸಿಕದ ಸಂಪಾದಕರು